# ವಿಸ್ಮಯಗೊಳಿಸುವ ಕುರ್‌ಆನ್

[ القران المذهل ]

**[Kannada – ಕನ್ನಡ – كنادي ]**


**ಗ್ಯಾರಿ ಮಿಲ್ಲರ್**

**غاري ميلر**

**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**



www.islamhouse.com

**1435 – 2014**

## ಒಳಪುಟಗಳಲ್ಲಿ...


ಪ್ರಸ್ತಾವನೆ 3

1. ವ್ಯಾಪಾರ ನೌಕೆ 6

2. ಅತಿ ಚಿಕ್ಕ ವಸ್ತು 7

3. ಜೇನು ತುಪ್ಪ 8

4. ಪ್ರವಾದಿ ಮುಹಮ್ಮದ್(ﷺ) ಮತ್ತು ಕುರ್‌ಆನ್ 11

5. ಕುರ್‌ಆನ್‌ನೆಡೆಗೆ ವೈಜ್ಞಾನಿಕವಾಗಿ ಸಮೀಪಿಸುವುದು 13

6. ಸುಳ್ಳಾಗಿಸುವ ಪರೀಕ್ಷೆ 15

7. ಜ್ಞಾನವಿರುವವರೊಂದಿಗೆ ವಿಚಾರಿಸಿ 17

8. ಭ್ರೂಣಶಾಸ್ತ್ರ 18

9. ಸಂದೇಹವಾದಿಯ ಪ್ರತಿಕ್ರಿಯೆ 20

10. ಭೂಗರ್ಭಶಾಸ್ತ್ರ 22

11. ನೀವು ಇದಕ್ಕಿಂತ ಮುಂಚೆ ಇದನ್ನು ಅರಿತಿರಲಿಲ್ಲ! 23

12. ಸಾಚಾತನದ ಪುರಾವೆ: ಒಂದು ಸಮೀಪನೆ 24

13. ಪರ್ಯಾಯಗಳನ್ನು ಇಲ್ಲದಾಗಿಸುವುದು 28

| | | |
|---|---|---|
| 14. | ವಿಮರ್ಶಕನ ಗೋಳು! | 30 |
| 15. | ಅಬೂ ಲಹಬ್ | 32 |
| 16. | ವಲಸೆ | 34 |
| 17. | ಸಚಿವರೊಂದಿಗೆ ಒಂದು ಮುಖಾಮುಖಿ | 36 |
| 18. | ಕುರ್‌ಆನ್‌ನ ಮೂಲ | 37 |
| 19. | ಮೈಥೋಮೇನಿಯಾ | 40 |
| 20. | ನ್ಯೂ ಕೆಥೋಲಿಕ್ ಎನ್‌ಸೈಕ್ಲೋಪೀಡಿಯಾ | 43 |
| 21. | ಬುದ್ಧಿವಂತನ ಸತ್ಯಸಾಕ್ಷ್ಯ | 45 |
| 22. | ಪುರಾವೆಯ ಹೊರೆ ವಿಮರ್ಶಕರ ಮೇಲಿದೆ | 46 |
| 23. | ವಿಶ್ವ ಮತ್ತು ಜೀವದ ಮೂಲ | 47 |
| 24. | ಸುಳ್ಳಾಗಿಸುವ ಪರೀಕ್ಷೆಯ ಬಗ್ಗೆ ಇನ್ನಷ್ಟು | 49 |
| 25. | ಗ್ರಂಥದವರು | 50 |
| 26. | ಒಂದು ಗಣಿತಶಾಸ್ತ್ರೀಯ ಸಮೀಪನೆ | 51 |
| 27. | ಹೆಣ್ಣು ಜೇನು ನೊಣ | 54 |
| 28. | ಸೂರ್ಯ | 55 |

| | | |
|---|---|---|
| **29.** | **ಕಾಲವಲಯಗಳು** | **57** |
| **30.** | **ಸಮಾಪ್ತಿ** | **58** |

بِسْمِ اللهِ الرَّحْمَـنِ الرَّحِيم

# ಪ್ರಸ್ತಾವನೆ

**ಕುರ್‌ಆನನ್ನು** ಹತ್ತಿರದಿಂದ ಪರೀಕ್ಷಿಸುವಾಗ ಒಂದು ವಿಷಯವು ಮುಸ್ಲಿಮೇತರರನ್ನು ಅಚ್ಚರಿಪಡಿಸುತ್ತದೆ. ಅದೇನೆಂದರೆ ಕುರ್‌ಆನ್ ಹೇಗಿರಬಹುದೆಂದು ಅವರು ನಿರೀಕ್ಷಿಸಿರುತ್ತಾರೋ ಆ ನಿರೀಕ್ಷೆಯಂತೆ ಅದು ಅವರಿಗೆ ಗೋಚರವಾಗುವುದಿಲ್ಲ ಎನ್ನುವುದು. ತಮ್ಮ ಕೈಯಲ್ಲಿರುವುದು ಹದಿನಾಲ್ಕು ಶತಮಾನಗಳ ಹಿಂದೆ ಅರೇಬಿಯಾದ ಮರುಭೂಮಿಯಿಂದ ಬಂದ ಒಂದು ಹಳೆಯ ಗ್ರಂಥವಾಗಿದೆಯೆಂದು ಅವರು ಭಾವಿಸುತ್ತಾರೆ. ಆ ಗ್ರಂಥವು ಮರುಭೂಮಿಯ **ಹಳೆಯ ಗ್ರಂಥದಂತೆ** ಇರಬೇಕು ಎಂಬ ಒಂದು ಪೂರ್ವ ನಿರ್ಧಾರವನ್ನೂ ಅವರು ತಾಳಿರುತ್ತಾರೆ. ಆದರೆ ಅದು ಅವರು ಕಲ್ಪಿಸಿಕೊಂಡಂತಿರುವ ಒಂದು ಗ್ರಂಥ ಅಲ್ಲವೇ ಅಲ್ಲ ಎನ್ನುವುದನ್ನು ತರುವಾಯ ಅವರು ಕಂಡುಕೊಳ್ಳುತ್ತಾರೆ. ವಾಸ್ತವದಲ್ಲಿ, ಈ ಗ್ರಂಥವು ಮರುಭೂಮಿಯಿಂದ ಬಂದಿರುವುದರಿಂದ ಅದು ಮರುಭೂಮಿಯ ಬಗ್ಗೆಯೇ ಮಾತನಾಡಬೇಕು ಎನ್ನುವುದು ಕೆಲವು ಜನರು ಮೊಟ್ಟಮೊದಲು ಈ ಗ್ರಂಥದ ಬಗ್ಗೆ ಊಹಿಸುವ ಕೆಲವು ವಿಷಯಗಳಾಗಿವೆ. ಸರಿ, ಕುರ್‌ಆನ್ ಮರುಭೂಮಿಯ ಬಗ್ಗೆ ಮಾತನಾಡುತ್ತದೆ ಎನ್ನುವುದು ಸತ್ಯ, –ಅದರಲ್ಲಿರುವ ಕೆಲವೊಂದು ನಿರೂಪಣೆಗಳು ಮರುಭೂಮಿಯ ಬಗ್ಗೆ ವಿವರಣೆ ನೀಡುತ್ತವೆ; ಆದರೆ ಅದು ಸಮುದ್ರಗಳ ಬಗ್ಗೆಯೂ ಮಾತನಾಡುತ್ತದೆ– ಸಮುದ್ರದಲ್ಲುಂಟಾಗುವ ಬಿರುಗಾಳಿಯು ಹೇಗಿರುತ್ತದೆಂಬುದನ್ನೂ ಅದು ವಿವರಿಸುತ್ತದೆ!

# ವ್ಯಾಪಾರ ನೌಕೆ

ಕೆಲವು ವರ್ಷಗಳ ಹಿಂದೆ ಟೊರೊಂಟೋದಲ್ಲಿದ್ದಾಗ, **ವ್ಯಾಪಾರ ನೌಕೆಯಲ್ಲಿ** ತನ್ನ ಬದುಕನ್ನು ಸಾಗಿಸುತ್ತಿದ್ದ ಒಬ್ಬ ನಾವಿಕನ ಕಥೆಯು ನಮ್ಮನ್ನು ತಲುಪಿತು. ಯಾರೋ ಒಬ್ಬ ಮುಸ್ಲಿಮನು ಆ ನಾವಿಕನಿಗೆ ಕುರ್‌ಆನ್ ಭಾಷಾಂತರದ ಒಂದು ಪ್ರತಿಯನ್ನು ಓದಲು ಕೊಟ್ಟಿದ್ದನು. ಆ ನಾವಿಕನಿಗೆ ಇಸ್ಲಾಮಿನ ಇತಿಹಾಸದ ಬಗ್ಗೆ ಯಾವುದೇ ಮಾಹಿತಿಯಿರಲಿಲ್ಲ. ಆದರೆ ಕುರ್‌ಆನ್ ಓದುವುದರಲ್ಲಿ ಆತನಿಗೆ ಏನೋ ಒಂದು ಆಸಕ್ತಿಯಿತ್ತು. ಹೀಗೆ ಆತ ಕುರ್‌ಆನನ್ನು ಓದಿ ಮುಗಿಸಿದ ಬಳಿಕ ಅದನ್ನು ಆ ಮುಸ್ಲಿಮನಿಗೆ ಹಿಂದಿರುಗಿಸಿ, 'ಈ ಮುಹಮ್ಮದ್ ಎಂಬ ವ್ಯಕ್ತಿ ನಾವಿಕರಾಗಿದ್ದರೇ?' ಎಂದು ಪ್ರಶ್ನಿಸಿದ. ಸಮುದ್ರದಲ್ಲುಂಟಾಗುವ ಬಿರುಗಾಳಿಯ ಬಗ್ಗೆ ಕುರ್‌ಆನ್ ಎಷ್ಟು ಕರಾರುವಾಕ್ಕಾಗಿ ವಿವರಿಸುತ್ತದೆ ಎಂಬ ವಿಷಯದಲ್ಲಿ ಆತ ಬಹಳ ಪ್ರಭಾವಿತನಾಗಿದ್ದನು. 'ಅಲ್ಲ, ವಾಸ್ತವವಾಗಿ ಮುಹಮ್ಮದ್(ﷺ) ಮರುಭೂಮಿ ನಿವಾಸಿಯಾಗಿದ್ದರು' ಎಂದು ಆತನಿಗೆ ಉತ್ತರ ನೀಡಲಾದಾಗ ಅದು ಆತನಿಗೆ ಸಾಕಾಗಿತ್ತು. ಆತ ಆ ಸ್ಥಳದಲ್ಲೇ ಇಸ್ಲಾಮನ್ನು ಸ್ವೀಕರಿಸಿದನು.

ಆತ ಕುರ್‌ಆನ್‌ನ ವಿವರಣೆಯ ಬಗ್ಗೆ ಅಷ್ಟು ಪ್ರಭಾವಿತನಾಗುವುದಕ್ಕೆ ಕಾರಣ ಸಮುದ್ರದಲ್ಲುಂಟಾದ ಬಿರುಗಾಳಿಯನ್ನು ಆತ ಸ್ವತಃ ಅನುಭವಿಸಿದ್ದನು ಮತ್ತು ಅದರ ಬಗ್ಗೆ ಯಾರಾದರೂ ಇಷ್ಟು ನಿಖರವಾಗಿ ಮಾಹಿತಿ ನೀಡಬೇಕಾದರೆ ಆ ವ್ಯಕ್ತಿ ಕೂಡ ಸಮುದ್ರದ ಬಿರುಗಾಳಿಯನ್ನು ಅನುಭವಿಸಿರಬೇಕೆಂಬುದು ಆತನ ಲೆಕ್ಕಾಚಾರವಾಗಿತ್ತು.

﴿ مَوْجٌ مِنْ فَوْقِهِ مَوْجٌ مِنْ فَوْقِهِ سَحَابٌ ﴾

**“...ಒಂದು ಅಲೆ, ಅದರ ಮೇಲೆ ಮತ್ತೊಂದು ಅಲೆ, ಅದರ ಮೇಲೆ ಮೋಡಗಳು.” [ಕುರ್‌ಆನ್ 24:40]**

ಸಮುದ್ರದ ಬಿರುಗಾಳಿಯನ್ನು ಊಹಿಸಿ ಬರೆಯುವ ಒಬ್ಬ ವ್ಯಕ್ತಿಗೆ ಇಂತಹ ಪ್ರಮಾದರಹಿತ ವಿವರಣೆಯನ್ನು ನೀಡಲು ಸಾಧ್ಯವಿಲ್ಲ. ಸಮುದ್ರದ ಬಿರುಗಾಳಿಯು ಹೇಗಿರುತ್ತದೆಯೆಂಬುದರ ಬಗ್ಗೆ ಖಚಿತ ಮಾಹಿತಿಯಿರುವ ವ್ಯಕ್ತಿಯಿಂದ ಮಾತ್ರ ಇಂತಹ ಒಂದು ವಿವರಣೆಯನ್ನು ನೀಡುವುದು ಸಾಧ್ಯ! ಕುರ್‌ಆನ್ ಯಾವುದೋ ಒಂದು ನಿರ್ದಿಷ್ಟ ಸ್ಥಳ ಅಥವಾ ಕಾಲದೊಂದಿಗೆ ಬಂಧಿತವಾಗಿಲ್ಲ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಹೌದು! ಕುರ್‌ಆನ್‌ನಲ್ಲಿರುವ ವೈಜ್ಞಾನಿಕ ವಿಚಾರಗಳು ಅದು ಹದಿನಾಲ್ಕು ಶತಮಾನಗಳ ಹಿಂದೆ ಒಂದು ಮರುಭೂಮಿಯಿಂದ ಬಂದ ಗ್ರಂಥವೆಂಬ ಭಾವನೆಯನ್ನು ನೀಡುವುದೇ ಇಲ್ಲ.

## ಅತಿ ಚಿಕ್ಕ ವಸ್ತು

ಪ್ರವಾದಿ ಮುಹಮ್ಮದ್(ﷺ)ರವರ ಕಾಲಕ್ಕಿಂತ ಅನೇಕ ಶತಮಾನಗಳ ಹಿಂದೆ ಗ್ರೀಕ್ ತತ್ವಜ್ಞಾನಿಯಾದ ಡೆಮಾಕ್ರಿಟಸ್ ಅಭಿವೃದ್ಧಿಪಡಿಸಿದ *ಪರಮಾಣು ಸಿದ್ಧಾಂತವು* (theory of atomism) ಆಗ ಅಸ್ತಿತ್ವದಲ್ಲಿತ್ತು. ಪದಾರ್ಥವು ಸೂಕ್ಷ್ಮವಾದ, ನಾಶಪಡಿಸಲಾಗದ ಮತ್ತು ವಿಭಜಿಸಲಾಗದ ಅಣುಗಳನ್ನು ಹೊಂದಿದೆ ಎಂದು ಡೆಮಾಕ್ರಿಟಸ್ ಮತ್ತು ಆತನ ನಂತರ ಬಂದವರೆಲ್ಲರೂ ಭಾವಿಸಿದ್ದರು. ಈ ವಿಷಯದಲ್ಲಿ ಅರಬರು ಕೂಡ ಇದೇ ಪರಿಕಲ್ಪನೆಯನ್ನು ಹೊಂದಿದ್ದರು. *‘ಝುರ್ರ’* (ذَرَّة) ಎಂಬ ಅರಬಿ ಪದವು ಮನುಷ್ಯನಿಗೆ

ತಿಳಿದಿರುವ ಅತಿ ಚಿಕ್ಕ ಕಣವನ್ನು ಸೂಚಿಸಲು ಬಳಸಲಾಗುತ್ತಿತ್ತು. ಆದರೆ ಪದಾರ್ಥದ ಈ ಅತಿ ಚಿಕ್ಕ ಘಟಕವನ್ನು (ಅಂದರೆ ಅಣುವನ್ನು) ಹಲವು ಭಾಗಗಳಾಗಿ ಪುನಃ ವಿಭಜಿಸಬಹುದೆಂದು ಆಧುನಿಕ ವಿಜ್ಞಾನವು ಈಗ ಹೇಳುತ್ತದೆ. ಇದು ಕಳೆದ ಶತಮಾನದಲ್ಲಷ್ಟೇ ಸಂಶೋಧಿಸಲಾದ ಒಂದು ಹೊಸ ವಿಚಾರವಾಗಿದೆ. ಆದರೆ ಅಚ್ಚರಿಯೇನೆಂದರೆ, ಈ ಮಾಹಿತಿ ಸಹ ಕುರ್‌ಆನಿನಲ್ಲಿ ದಾಖಲುಗೊಂಡಿದೆ. ಕುರ್‌ಆನ್ ಹೇಳುತ್ತದೆ:

﴿ لَا يَعْزُبُ عَنْهُ مِثْقَالُ ذَرَّةٍ فِي السَّمَاوَاتِ وَلَا فِي الْأَرْضِ وَلَا أَصْغَرُ مِنْ ذَلِكَ وَلَا أَكْبَرُ ﴾

**“ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಒಂದು ಅಣುವಿನ ತೂಕದ, ಅದಕ್ಕಿಂತ ಚಿಕ್ಕದಾಗಿರುವುದೋ ದೊಡ್ಡದಾಗಿರುವುದೋ ಆದ ಯಾವುದೂ ಅವನಿಂದ (ಅಲ್ಲಾಹನಿಂದ) ಮರೆಯಾಗಿಲ್ಲ.” [ಕುರ್‌ಆನ್ 34:3]**

ಅನುಮಾನವೇ ಇಲ್ಲ, ಹದಿನಾಲ್ಕು ಶತಮಾನಗಳ ಹಿಂದೆ ಈ ನಿರೂಪಣೆಯು ಒಬ್ಬ ಅರಬನಿಗೂ ಸಹ ಅಸಹಜವಾಗಿ ಕಂಡಿರಬಹುದು. ಯಾಕೆಂದರೆ ಅರಬರು *‘ಝುರ್ರ‌ಃ’* ಎಂಬುದನ್ನೇ ಅತಿ ಚಿಕ್ಕ ವಸ್ತುವಾಗಿ ಪರಿಗಣಿಸಿದ್ದರು. ಕುರ್‌ಆನ್ ಸಾರ್ವಕಾಲಿಕವಾಗಿದೆ ಎಂಬುದಕ್ಕೆ ಇದೂ ಒಂದು ಪುರಾವೆಯಾಗಿದೆ.

## ಜೇನು ತುಪ್ಪ

ಆರೋಗ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಒಂದು **‘ಹಳೆಯ ಗ್ರಂಥ’ದಲ್ಲಿ** ಒಬ್ಬ ವ್ಯಕ್ತಿ ನಿರೀಕ್ಷಿಸುವ ಆರೋಗ್ಯ ಅಥವಾ ಔಷಧಿಗೆ ಸಂಬಂಧಿಸಿದ ವಿಷಯವು ಕೇವಲ ಅವಧಿ ಮೀರಿದ ರೋಗ ಪರಿಹಾರ ಅಥವಾ ಚಿಕಿತ್ಸೆ ಮಾತ್ರವಾಗಿರಬಹುದು.

ಪ್ರವಾದಿ ಮುಹಮ್ಮದ್(ﷺ)ರವರು ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದರೆಂದು ಅನೇಕ ಐತಿಹಾಸಿಕ ಮೂಲಗಳು ಉಲ್ಲೇಖಿಸಿವೆ. ಆದರೆ ಅಂತಹ ಸಲಹೆ ಸೂಚನೆಗಳ ಪೈಕಿ ಹೆಚ್ಚಿನವುಗಳೂ ಕುರ್‌ಆನ್‌ನಲ್ಲಿಲ್ಲ. ಮೊದಲ ನೋಟದಲ್ಲಿ, ಒಬ್ಬ ಮುಸ್ಲಿಮೇತರನಿಗೆ ಇದೊಂದು ತಿರಸ್ಕಾರದಿಂದ ಕೂಡಿದ ಲೋಪವೆಂಬಂತೆ ಗೋಚರಿಸಬಹುದು. ಅಲ್ಲಾಹು ಇಂತಹ ಉಪಯುಕ್ತ ಮಾಹಿತಿಗಳನ್ನು ಕುರ್‌ಆನ್‌ನಲ್ಲಿ ಯಾಕೆ 'ಸೇರಿಸಿಲ್ಲ' ಎನ್ನುವುದು ಅವರಿಗೆ ಅರ್ಥವಾಗದೆ ಹೋಗಬಹುದು. ಕೆಲವು ಮುಸ್ಲಿಮರು ಈ ಲೋಪವನ್ನು ಒಂದು ವಿಶಿಷ್ಠವಾದದೊಂದಿಗೆ ವಿವರಿಸಲು ಪ್ರಯತ್ನಿಸಿದರು. "ಪ್ರವಾದಿ ಮುಹಮ್ಮದ್(ﷺ)ರವರ ಸಲಹೆ ಸೂಚನೆಗಳು ಸ್ವಸ್ಥವೂ, ಅವರು ಬದುಕಿದ್ದ ಕಾಲದಲ್ಲಿ ಪ್ರಾಯೋಗಿಕವಾಗಿರುವಂತದ್ದೂ ಆಗಿದ್ದರೂ ಕೂಡ, ಅಲ್ಲಾಹು ತನ್ನ ಅಪರಿಮಿತ ವಿವೇಕದಿಂದಾಗಿ, ನಂತರದ ಕಾಲಘಟ್ಟದಲ್ಲಿ ಕೆಲವು ವೈದ್ಯಕೀಯ ಮತ್ತು ವೈಜ್ಞಾನಿಕ ಪ್ರಗತಿಗಳು ಸಂಭವಿಸಿ ಅವು ಪ್ರವಾದಿ ಮುಹಮ್ಮದ್(ﷺ)ರವರ ಸಲಹೆ ಸೂಚನೆಗಳನ್ನು ಅವಧಿ ಮೀರಿದ ಸಲಹೆ ಸೂಚನೆಗಳನ್ನಾಗಿ ಮಾಡಿಬಿಡಬಹುದು. ಹೀಗೆ ಹೊಸ ಸಂಶೋಧನೆಗಳು ಜರುಗಿದಾಗ ಅವು ಪ್ರವಾದಿ ಮುಹಮ್ಮದ್(ﷺ)ರವರು ನೀಡಿದ ಮಾಹಿತಿಗಳಿಗೆ ವಿರುದ್ಧವಾಗಿದೆಯೆಂದು ಜನರು ಹೇಳುವರು. ಆದ್ದರಿಂದ ಕುರ್‌ಆನ್ ತನಗೆ ತಾನೇ ವಿರುದ್ಧವಾಗಿದೆ ಅಥವಾ ಪ್ರವಾದಿ ಮುಹಮ್ಮದ್(ﷺ)ರವರ ವಚನಗಳಿಗೆ ವಿರುದ್ಧವಾಗಿದೆ ಎಂದು ವಾದಿಸುವ ಅವಕಾಶವನ್ನು ಅಲ್ಲಾಹು ಯಾವುದೇ ಮುಸ್ಲಿಮೇತರನಿಗೂ ಮಾಡಿಕೊಟ್ಟಿಲ್ಲ. ಎಲ್ಲ ಕಾಲಗಳಲ್ಲೂ ಪ್ರಾಯೋಗಿಕವಾಗುವ ಮಾಹಿತಿಗಳನ್ನು ಮತ್ತು ಉದಾಹರಣೆಗಳನ್ನು ಮಾತ್ರ ಅಲ್ಲಾಹು ಕುರ್‌ಆನ್‌ನಲ್ಲಿ ಸೇರಿಸಿದ್ದಾನೆ" ಎನ್ನುವುದಾಗಿದೆ ಆ ವಾದ. ಆದರೆ, ಒಂದು ದೈವಿಕ ಸಂದೇಶವೆಂಬ ಪರಿಗಣನೆಯಲ್ಲಿ ಕುರ್‌ಆನಿನ ನೈಜ ವಾಸ್ತವಾಂಶಗಳನ್ನು ಒಬ್ಬನು ಪರೀಕ್ಷಿಸುವಾಗ, ಈ ಸಂಪೂರ್ಣ ವಿಷಯವನ್ನು ಅದರ ಸೂಕ್ತ ಸ್ಥಾನಕ್ಕೆ

ತಕ್ಷಣ ತರಲಾಗುತ್ತದೆ ಮತ್ತು ಈ ಮೇಲಿನ ವಾದದಲ್ಲಿರುವ ಪ್ರಮಾದವು ಸ್ಪಷ್ಟವೂ ಗ್ರಾಹ್ಯವೂ ಆಗಿ ಗೋಚರವಾಗುತ್ತದೆ.

ಕುರ್‌ಆನ್ ಒಂದು ದೈವಿಕ ಗ್ರಂಥವಾಗಿರುವುದರಿಂದ, ಅದರಲ್ಲಿರುವ ಮಾಹಿತಿಗಳೆಲ್ಲವೂ ದೈವಿಕ ಮೂಲದಿಂದ ಬಂದದ್ದಾಗಿವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅಲ್ಲಾಹು ಕುರ್‌ಆನನ್ನು ತನ್ನ ವತಿಯಿಂದಲೇ ಅವತೀರ್ಣಗೊಳಿಸಿದ್ದಾನೆ. ಅದು ಅಲ್ಲಾಹನ ವಚನವಾಗಿದೆ. ಸೃಷ್ಟಿಗಿಂತ ಮೊದಲೇ ಅದು ಅಸ್ತಿತ್ವದಲ್ಲಿತ್ತು. ಆದ್ದರಿಂದ ಅದಕ್ಕೆ ಏನನ್ನಾದರೂ ಸೇರಿಸಲೋ ಅಥವಾ ಅದರಿಂದ ಏನನ್ನಾದರೂ ಕಳೆಯಲೋ ಅಥವಾ ಅದರಲ್ಲಿ ಯಾವುದಾದರೂ ಬದಲಾವಣೆಯನ್ನು ಮಾಡಲೋ ಯಾರಿಗೂ ಸಾಧ್ಯವಿಲ್ಲ. ವಾಸ್ತವವಾಗಿ, ಪ್ರವಾದಿ ಮುಹಮ್ಮದ್(ﷺ)ರವರನ್ನು ಸೃಷ್ಟಿಸುವುದಕ್ಕೆ ಮೊದಲೇ ಕುರ್‌ಆನ್ ಅದರ ಪೂರ್ಣ ರೂಪದಲ್ಲಿ ಅಸ್ತಿತ್ವದಲ್ಲಿತ್ತು. ಆದ್ದರಿಂದ ಅದು ಪ್ರವಾದಿ ಮುಹಮ್ಮದ್(ﷺ)ರವರ ಯಾವುದೇ ವಚನಗಳನ್ನು ಅಥವಾ ಸಲಹೆ ಗಳನ್ನು ಒಳಗೊಂಡಿರಲು ಸಾಧ್ಯವಿಲ್ಲ. ಅಂತಹ ಮಾಹಿತಿಗಳ ಸೇರ್ಪಡೆಯು ಕುರ್‌ಆನ್ ಯಾವ ಉದ್ದೇಶಕ್ಕಾಗಿ ಅಸ್ತಿತ್ವದಲ್ಲಿದೆಯೋ ಆ ಉದ್ದೇಶಕ್ಕೆ ವಿರುದ್ಧವಾಗುತ್ತದೆ, ಅದರ ಸಾಚಾತನದಲ್ಲಿ ರಾಜಿ ಮಾಡಿದಂತಾಗುತ್ತದೆ ಮತ್ತು ಅದು ದೈವಿಕ ಗ್ರಂಥವಾಗಿದೆಯೆಂಬ ಸಾಚಾತನವನ್ನು ನಿರಾಕರಿಸಿದಂತಾಗುತ್ತದೆ.

ಆದ್ದರಿಂದ ಅವಧಿ ಮೀರಿದ್ದೆಂದು ಹೇಳುವಂತಹ ಯಾವುದೇ 'ಮನೆಮದ್ದು'ಗಳು ಕುರ್‌ಆನ್‌ನಲ್ಲಿಲ್ಲ. ಆರೋಗ್ಯಕ್ಕೆ ಹಿತಕರವಾದುದು ಏನು, ತಿನ್ನಲು ಉತ್ತಮವಾಗಿರುವ ಆಹಾರ ಯಾವುದು, ಈ ರೋಗವನ್ನು ಅಥವಾ ಆ ರೋಗವನ್ನು ಗುಣಪಡಿಸುವ ಮದ್ದು ಯಾವುದು ಇತ್ಯಾದಿಗಳ ಬಗ್ಗೆ ಮನುಷ್ಯನ ಯಾವುದೇ ದೃಷ್ಟಿಕೋನವನ್ನೂ ಕುರ್‌ಆನ್ ಒಳಗೊಂಡಿಲ್ಲ. ವಾಸ್ತವವಾಗಿ, ವೈದ್ಯಕೀಯ ಚಿಕಿತ್ಸೆಯ ಬಗ್ಗೆ ಕುರ್‌ಆನ್ ಒಂದೇ ಒಂದು ವಸ್ತುವನ್ನು ಪ್ರಸ್ತಾಪಿಸಿದೆ. ಅದರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿರಲಾರದು. ಅದೇನೆಂದರೆ **'ಜೇನು ತುಪ್ಪ'ದಲ್ಲಿ** ಉಪಶಮನವಿದೆಯೆಂದು ಕುರ್‌ಆನ್

ಹೇಳುತ್ತದೆ. ಖಂಡಿತವಾಗಿಯೂ, ಈ ವಿಷಯದಲ್ಲಿ ಯಾರಾದರೂ ವಾದ ಮಂಡಿಸುವರೆಂದು ನಾನು ಭಾವಿಸುವುದಿಲ್ಲ!

## ಪ್ರವಾದಿ ಮುಹಮ್ಮದ್(ﷺ) ಮತ್ತು ಕುರ್‌ಆನ್

ಕುರ್‌ಆನ್ ಮನುಷ್ಯ ಮೆದುಳಿನ ಉತ್ಪತ್ತಿಯಾಗಿದೆಯೆಂದು ಯಾರಾದರೂ ಭಾವಿಸುವುದಾದರೆ, ಯಾವ ಮನುಷ್ಯನು ಅದನ್ನು 'ರಚಿಸಿದನೋ' ಅವನ ಮೆದುಳಿನಲ್ಲಿ ಉದ್ಭವಿಸುವ ವಿಚಾರಗಳನ್ನು ಅದು ಪ್ರತಿಬಿಂಬಿಸುತ್ತದೆಯೆಂದು ಖಚಿತವಾಗಿ ಹೇಳಬಹುದು. ವಾಸ್ತವವಾಗಿ, ಕುರ್‌ಆನ್ ಪ್ರವಾದಿ ಮುಹಮ್ಮದ್ (ﷺ)ರವರಿಗೆ ಉಂಟಾಗುತ್ತಿದ್ದ ಮನೋಭ್ರಾಂತಿಗಳ (hallucination) ಉತ್ಪತ್ತಿಯಾಗಿದೆಯೆಂದು ಕೆಲವು ಎನ್‌ಸೈಕ್ಲೋಪೀಡಿಯಾಗಳು ಹಾಗೂ ಮತ್ತಿತರ ಗ್ರಂಥಗಳು ಆರೋಪಿಸುತ್ತವೆ. ಈ ಆರೋಪಗಳು ಸತ್ಯವಾಗಿದ್ದರೆ –ಅಂದರೆ ಮುಹಮ್ಮದ್(ﷺ)ರವರ ಮನಸ್ಸಿನಲ್ಲಿದ್ದ ಕೆಲವು ಮಾನಸಿಕ ಸಮಸ್ಯೆಗಳಿಂದಾಗಿ ಕುರ್‌ಆನ್ ರೂಪುಗೊಂಡಿದ್ದಾಗಿದ್ದರೆ– ಅದರ ಪ್ರತಿಬಿಂಬವು ಕುರ್‌ಆನ್‌ನಲ್ಲಿ ಸ್ಪಷ್ಟವಾಗಿ ಗೋಚರಿಸಬೇಕಾಗಿತ್ತು. ಅಂತಹ ಪ್ರತಿಬಿಂಬವೇನಾದರೂ ಇದೆಯೇ? ಅದು ಇದೆಯೇ ಅಥವಾ ಇಲ್ಲವೇ ಎಂದು ತೀರ್ಮಾನಿಸಲು, ಆ ಕಾಲದಲ್ಲಿ ಯಾವೆಲ್ಲ ವಿಚಾರಗಳು ಮುಹಮ್ಮದ್(ﷺ)ರವರ ಮನದಲ್ಲಿ ವಿಹರಿಸುತ್ತಿದ್ದವು ಎನ್ನುವುದನ್ನು ನಾವು ಮೊಟ್ಟಮೊದಲು ಗುರುತಿಸಬೇಕಾಗಿದೆ ಮತ್ತು ಆ ವಿಚಾರಗಳನ್ನು ಮತ್ತು ಅದರ ಪ್ರತಿಬಿಂಬಗಳನ್ನು ಕುರ್‌ಆನ್‌ನಲ್ಲಿ ಹುಡುಕಬೇಕಾಗಿದೆ.

ಮುಹಮ್ಮದ್(ﷺ)ರವರು ಬಹಳ ಪ್ರಯಾಸಕರ ಬದುಕನ್ನು ಸಾಗಿಸಿದ್ದರು ಎನ್ನುವುದು ಎಲ್ಲರೂ ತಿಳಿದಿರುವ ವಿಚಾರವಾಗಿದೆ. ಒಬ್ಬಳು ಮಗಳ ಹೊರತು ಅವರ ಮಕ್ಕಳೆಲ್ಲರೂ ಅವರ ಕಣ್ಮುಂದೆಯೇ ಮರಣವನ್ನಪ್ಪಿದರು. ಅನೇಕ ವರ್ಷಗಳ ಕಾಲ ಅವರೊಂದಿಗೆ ಜೊತೆಯಾಗಿ ಬಾಳಿದ, ಅತ್ಯಂತ ಪ್ರಿಯ ಮತ್ತು ಅತಿ ಪ್ರಾಮುಖ್ಯತೆಯನ್ನು ಹೊಂದಿದ್ದ ಒಬ್ಬ ಮಡದಿ ಅವರಿಗಿದ್ದರು. ಆದರೆ ಆ ಮಡದಿಯು ಸಹ ಅವರು ಬದುಕಿರುವಾಗಲೇ, ಅದೂ ಅವರ ಬದುಕಿನ ಅತ್ಯಂತ ಸಂದಿಗ್ಧ ಘಟ್ಟದಲ್ಲೇ ಮರಣವನ್ನಪ್ಪಿದ್ದರು. ವಾಸ್ತವವೇನೆಂದರೆ, ಆಕೆ ಒಬ್ಬ ಪರಿಪೂರ್ಣ ಮಹಿಳೆಯಾಗಿದ್ದರು. ಯಾಕೆಂದರೆ ಮೊಟ್ಟಮೊದಲ ಬಾರಿಗೆ ದಿವ್ಯ ಸಂದೇಶದ ಅವತೀರ್ಣವುಂಟಾದಾಗ ಮುಹಮ್ಮದ್(ﷺ)ರವರು ಭಯದಿಂದ ಆಕೆಯ ಬಳಿಗೆ ಓಡಿದ್ದರು. ಖಂಡಿತವಾಗಿಯೂ, ಇಂದಿನ ಕಾಲದಲ್ಲಿ ಕೂಡ 'ನಾನೆಷ್ಟು ಭಯಭೀತನಾಗಿದ್ದೆನೆಂದರೆ ನಾನು ನೇರವಾಗಿ ನನ್ನ ಮಡದಿಯೆಡೆಗೆ ಓಡಿದೆ' ಎಂದು ಹೇಳುವ ಓರ್ವ ಅರಬನನ್ನು ಕಾಣುವುದು ತೀರಾ ವಿರಳ! ಯಾಕೆಂದರೆ ಅವರು ಹಾಗಿಲ್ಲ. ಆದರೆ ಮುಹಮ್ಮದ್(ﷺ)ರವರು ತಮ್ಮ ಮಡದಿಯೊಂದಿಗೆ ಎಷ್ಟೊಂದು ಹಿತವನ್ನು ಅನುಭವಿಸಿದ್ದರು ಎಂದರೆ ಭಯಭೀತರಾದಾಗ ಆಕೆಯ ಬಳಿಗೆ ಓಡಲು ಅವರಿಗೆ ಸಾಧ್ಯವಾಗಿತ್ತು. ಅವರ ಮಡದಿ ಎಷ್ಟು ಪ್ರಭಾವಶಾಲಿ ಮತ್ತು ಪ್ರಬಲ ಮಹಿಳೆಯಾಗಿದ್ದರು ಎನ್ನುವುದನ್ನು ಇದು ಸೂಚಿಸುತ್ತದೆ. ಇವೆಲ್ಲವೂ ಮುಹಮ್ಮದ್(ﷺ)ರವರ ಮನದಲ್ಲಿರ ಬಹುದಾದ ವಿಚಾರಗಳಲ್ಲಿ ಕೆಲವು ಮಾತ್ರವಾಗಿವೆ. ನನ್ನ ವಾದವನ್ನು ರುಜುವಾತುಪಡಿಸಲು ಇವು ಪರ್ಯಾಪ್ತವಾಗಬಹುದು.

ಆದರೆ ಇವುಗಳ ಪೈಕಿ ಯಾವುದನ್ನೂ ಕುರ್‌ಆನ್ ಪ್ರಸ್ತಾಪಿಸುವುದಿಲ್ಲ. ಅಂದರೆ ಮುಹಮ್ಮದ್(ﷺ)ರವರ ಮಕ್ಕಳ ಮರಣವನ್ನಾಗಲಿ, ಅವರ ಆತ್ಮೀಯ ಸಂಗಾತಿ ಮತ್ತು ಮಡದಿಯ ಮರಣವನ್ನಾಗಲಿ, ಅವರು ತಮ್ಮ ಮಡದಿಯೊಂದಿಗೆ ಬಹಳ ಸುಂದರವಾಗಿ ಹಂಚಿದ, ಪ್ರಾರಂಭದ ದಿವ್ಯ ಸಂದೇಶಗಳ ಅವತೀರ್ಣದ ಬಗ್ಗೆ ಅವರಿಗಿದ್ದ ಭಯವನ್ನಾಗಲಿ ಯಾವುದನ್ನೂ ಕುರ್‌ಆನ್

ಪ್ರಸ್ತಾಪಿಸುವುದಿಲ್ಲ. ಆದರೂ ಇವೆಲ್ಲ ವಿಚಾರಗಳೂ ಮುಹಮ್ಮದ್(ﷺ)ರನ್ನು ಬಹಳ ಘಾಸಿಗೊಳಿಸಿವೆ, ಅವರನ್ನು ಕಾಡಿವೆ ಮತ್ತು ಅವರ ಬದುಕಿನುದ್ದಕ್ಕೂ ಅವರಿಗೆ ನೋವನ್ನೂ ದುಃಖವನ್ನೂ ಉಣಿಸಿವೆ. ಹೌದು! ಒಂದು ವೇಳೆ ಕುರ್‌ಆನ್ ಅವರ ಮಾನಸಿಕ ತಳಮಳದ ಉತ್ಪತ್ತಿಯಾಗಿದ್ದರೆ, ಇವೆಲ್ಲ ವಿಚಾರಗಳೂ, ಮಾತ್ರವಲ್ಲದೆ ಇವುಗಳೊಂದಿಗೆ ಇತರ ವಿಚಾರಗಳೂ ಸೇರಿ, ಕುರ್‌ಆನ್‌ನಲ್ಲಿ ದಾಖಲಾಗಬೇಕಿತ್ತು ಅಥವಾ ಕನಿಷ್ಟ ಪಕ್ಷ ಕುರ್‌ಆನ್‌ನ ಉದ್ದಕ್ಕೂ ಅದು ಪ್ರಸ್ತಾಪಿಸಲಾಗಬೇಕಿತ್ತು.

## ಕುರ್‌ಆನ್‌ನೆಡೆಗೆ ವೈಜ್ಞಾನಿಕವಾಗಿ ಸಮೀಪಿಸುವುದು

ಯಥಾರ್ಥವಾದ ವೈಜ್ಞಾನಿಕ ವಿಧಾನದಲ್ಲಿ ಕುರ್‌ಆನ್‌ನೆಡೆಗೆ ಸಮೀಪಿಸುವುದು ಸಾಧ್ಯವಿದೆ. ಯಾಕೆಂದರೆ ಪ್ರತ್ಯೇಕವಾಗಿ ಇತರ ಯಾವುದೇ ಧಾರ್ಮಿಕ ಗ್ರಂಥಗಳು ಒದಗಿಸದ ಮತ್ತು ಸಾಮಾನ್ಯವಾಗಿ ಇತರ ಯಾವುದೇ ಧರ್ಮಗಳಲ್ಲಿ ಕಂಡುಬರದ ಒಂದನ್ನು ಕುರ್‌ಆನ್ ನೀಡುತ್ತದೆ. ವಿಜ್ಞಾನಿಗಳು ಬೇಡುವುದೂ ಅದನ್ನೇ ಆಗಿದೆ. ಪ್ರಪಂಚವು ಹೇಗೆ ಕೆಲಸ ಮಾಡುತ್ತದೆ ಎಂಬ ಬಗ್ಗೆ ಇಂದು ಅನೇಕ ಜನರಿಗೆ ಹಲವಾರು ವಿಧದ ಕಲ್ಪನೆಗಳು ಮತ್ತು ಸಿದ್ಧಾಂತಗಳಿವೆ. ಇವರೆಲ್ಲರೂ ಒಂದು ಸ್ಥಳದಲ್ಲಿ ಒಟ್ಟುಗೂಡಿದರೂ ಸಹ ವೈಜ್ಞಾನಿಕ ಸಮುದಾಯವು ಅವರಿಂದ ಏನನ್ನೂ ಕೇಳಿಸಿಕೊಳ್ಳುವುದರ ಕಡೆಗೆ ಗಮನಹರಿಸುವುದಿಲ್ಲ. ಯಾಕೆಂದರೆ ಕಳೆದ ಶತಮಾನದಿಂದೀಚೆಗೆ ವೈಜ್ಞಾನಿಕ ಸಮುದಾಯವು *'ಸುಳ್ಳಾಗಿಸುವ ಪರೀಕ್ಷೆ'* (Falsification Test) ಎಂಬ ಒಂದು ಪರೀಕ್ಷೆಗಾಗಿ ಬೇಡಿಕೆಯಿಡುತ್ತಿದೆ. ಅಂದರೆ ವಿಜ್ಞಾನಿಗಳು ಹೇಳುತ್ತಾರೆ: 'ನಿಮ್ಮ ಬಳಿ ಒಂದು ಸಿದ್ಧಾಂತವಿದ್ದರೆ, ನಿಮಗೆ ಅದರಲ್ಲಿ ಪ್ರಮಾದವುಂಟಾ

ಗಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ರುಜುವಾತುಪಡಿಸುವ ಒಂದು ಮಾರ್ಗೋಪಾಯವನ್ನು ಆ ಸಿದ್ಧಾಂತದೊಂದಿಗೆ ತರುವ ಹೊರತು ನಾವು ನಿಮ್ಮ ಕಡೆಗೆ ಗಮನಹರಿಸುವೆವೆಂದು ನೀವು ಭಾವಿಸಬೇಕಾಗಿಲ್ಲ.'

ಈ ಶತಮಾನದ ಆದ್ಯಭಾಗದಲ್ಲಿ ವೈಜ್ಞಾನಿಕ ಸಮುದಾಯವು ಐನ್‌ಸ್ಟೀನ್‌ರ ಸಿದ್ಧಾಂತಗಳ ಕಡೆಗೆ ಕಿವಿಯೊಡ್ಡಿದ್ದು ಈ 'ಪರೀಕ್ಷೆ'ಯ ಕಾರಣದಿಂದಾಗಿತ್ತು. ಯಾಕೆಂದರೆ ಐನ್‌ಸ್ಟೀನ್ ಒಂದು ಹೊಸ ಸಿದ್ಧಾಂತದೊಂದಿಗೆ ಬಂದು ಹೇಳಿದರು: 'ಪ್ರಪಂಚವು ಈ ವಿಧಾನದಲ್ಲಿ ಕೆಲಸ ಮಾಡುತ್ತದೆ ಎಂದು ನಾನು ನಂಬುತ್ತೇನೆ. ನನಗೆ ಪ್ರಮಾದವುಂಟಾಗಿಲ್ಲ ಎಂಬುದನ್ನು ರುಜುವಾತುಪಡಿಸಲು ಇಲ್ಲಿ ಮೂರು ಮಾರ್ಗೋಪಾಯಗಳಿವೆ.' ಆದ್ದರಿಂದ ವೈಜ್ಞಾನಿಕ ಸಮುದಾಯವು ಅವರ ಸಿದ್ಧಾಂತವನ್ನು ಆ ಪರೀಕ್ಷೆಗಳಿಗೆ ಒಡ್ಡಿತು. ಕೇವಲ ಆರು ವರ್ಷಗಳಲ್ಲಿ ಆ ಸಿದ್ಧಾಂತವು ಮೂರು ಪರೀಕ್ಷೆಗಳಲ್ಲೂ ಉತ್ತೀರ್ಣ ಗೊಂಡಿತು. ಹೌದು! ಇದು ಐನ್‌ಸ್ಟೀನ್‌ರನ್ನು ಮಹಾನನೆಂದು ರುಜುವಾತು ಪಡಿಸುವುದಿಲ್ಲವಾದರೂ 'ಇದು ನನ್ನ ಕಲ್ಪನೆಯಾಗಿದೆ. ನನಗೆ ಪ್ರಮಾದ ವುಂಟಾಗಿದೆಯೆಂದು ರುಜುವಾತುಪಡಿಸಲು ನೀವು ಬಯಸುವುದಾದರೆ ಇದನ್ನು ಮಾಡಿರಿ ಅಥವಾ ಅದನ್ನು ಮಾಡಿರಿ' ಎಂದು ಅವರು ಹೇಳಿದಾಗ ಕಿವಿಯೊಡ್ಡಬೇಕಾದ ಅರ್ಹತೆ ಅವರ ಮಾತಿಗಿದೆ ಎನ್ನುವುದನ್ನು ಇದು ರುಜುವಾತುಪಡಿಸುತ್ತದೆ.

ಕುರ್‌ಆನ್ ಕೂಡ ಈ 'ಸುಳ್ಳಾಗಿಸುವ ಪರೀಕ್ಷೆ'ಗಳನ್ನು ಹೊಂದಿದೆ. ಅವುಗಳಲ್ಲಿ ಕೆಲವು ಹಳೆಯದಾಗಿವೆ (ಅಂದರೆ ಅವು ಈಗಾಗಲೇ ಸತ್ಯವೆಂದು ರುಜುವಾತಾಗಿವೆ) ಮತ್ತು ಕೆಲವು ಇಂದೂ ಅಸ್ತಿತ್ವದಲ್ಲಿವೆ. ಮೂಲಭೂತವಾಗಿ ಕುರ್‌ಆನ್ ಹೇಳುತ್ತದೆ: 'ಈ ಗ್ರಂಥವು ತನ್ನನ್ನು ತಾನೇ ಏನೆಂದು ವಾದಿಸುತ್ತದೆಯೋ ಅದನ್ನು ಸುಳ್ಳೆಂದು ರುಜುವಾತುಪಡಿಸಬೇಕಾದರೆ ನೀವು ಮಾಡಬೇಕಾದುದು ಕೇವಲ ಇದನ್ನು ಅಥವಾ ಅದನ್ನು ಮಾತ್ರವಾಗಿದೆ.' ಸತ್ಯವೇನೆಂದರೆ, ಕಳೆದ ಹದಿನಾಲ್ಕು ಶತಮಾನಗಳಿಂದ ಯಾರೊಬ್ಬರಿಗೂ

‘ಇದನ್ನು ಅಥವಾ ಅದನ್ನು’ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಕುರ್‌ಆನನ್ನು ಈಗಲೂ ಸತ್ಯ ಮತ್ತು ಸಾಚಾ ಎಂದು ಪರಿಗಣಿಸಲಾಗುತ್ತಿದೆ.

## ಸುಳ್ಳಾಗಿಸುವ ಪರೀಕ್ಷೆ

ನಾನು ನಿಮಗೆ ಒಂದು ಸಲಹೆಯನ್ನು ನೀಡುತ್ತೇನೆ. ಏನೆಂದರೆ ಮುಂದಿನ ಬಾರಿ ಯಾರಾದರೂ ಒಬ್ಬರೊಂದಿಗೆ ನೀವು ಇಸ್ಲಾಮಿನ ಬಗ್ಗೆ ಚರ್ಚಿಸುವಾಗ, ತಾನು ಸತ್ಯದಲ್ಲಿರುವೆನು ಮತ್ತು ನೀವು ಕತ್ತಲೆಯಲ್ಲಿರುವಿರಿ ಎಂದು ಆತ ವಾದಿಸಿದರೆ, ನೀವು ಎಲ್ಲ ಚರ್ಚೆಗಳನ್ನೂ ಬದಿಗಿಟ್ಟು ಈ ಸಲಹೆಯನ್ನು ಪಾಲಿಸಿರಿ. ಆತನೊಂದಿಗೆ ನೇರವಾಗಿ ಕೇಳಿರಿ: ‘ನಿಮ್ಮ ಧರ್ಮದಲ್ಲಿ ಯಾವುದಾದರೂ ಸುಳ್ಳಾಗಿಸುವ ಪರೀಕ್ಷೆಯಿದೆಯೇ? ನಿಮಗೆ ನಿಮ್ಮ ನಂಬಿಕೆಯಲ್ಲಿ ಪ್ರಮಾದ ಸಂಭವಿಸಿದೆ ಎನ್ನುವುದನ್ನು ರುಜುವಾತುಪಡಿಸುವ ಹಾಗೂ ನೀವು ಇಲ್ಲವೆನ್ನುವುದು ಅಸ್ತಿತ್ವದಲ್ಲಿದೆಯೆಂದು ನಾನು ರುಜುವಾತುಪಡಿಸುವಂತಹ ಏನಾದರೂ ನಿಮ್ಮ ಧರ್ಮದಲ್ಲಿದೆಯೇ?’ ಅಂತಹ ಯಾವುದೂ ಅವರ ಧರ್ಮದಲ್ಲಿರಲಾರದು, ಯಾವುದೇ ಪರೀಕ್ಷೆ, ಯಾವುದೇ ಪುರಾವೆ, ಏನೊಂದೂ ಇರಲಾರದೆಂದು ನಾನು ಭರವಸೆ ನೀಡುತ್ತೇನೆ. ಯಾಕೆಂದರೆ, ಅವರು ತಾವು ನಂಬುವ ಯಾವ ವಿಷಯವನ್ನು ಜನರ ಮುಂದೆ ಮಂಡಿಸುತ್ತಾರೋ, ಅದನ್ನು ಸುಳ್ಳೆಂದು ರುಜುವಾತುಪಡಿಸುವಂತಹ ಯಾವುದಾದರೂ ಅವಕಾಶವನ್ನು ಜನರಿಗೆ ಒದಗಿಸಬೇಕೆಂಬ ವಿಚಾರವು ಅವರಲ್ಲಿರುವುದಿಲ್ಲ. ಆದರೆ ಅದು ಇಸ್ಲಾಮಿನಲ್ಲಿದೆ.

ಇಸ್ಲಾಮ್ ತನ್ನ ಸಾಚಾತನವನ್ನು ಪರೀಕ್ಷಿಸುವ ಒಂದು ಅವಕಾಶವನ್ನು ಜನರಿಗೆ ಹೇಗೆ ಒದಗಿಸಿಕೊಡುತ್ತದೆ ಎನ್ನುವುದಕ್ಕಿರುವ ಒಂದು ನಿಖರವಾದ ಪುರಾವೆಯು

ಕುರ್‌ಆನಿನ 4ನೇ ಅಧ್ಯಾಯದಲ್ಲಿದೆ. ಪ್ರಾಮಾಣಿಕವಾಗಿ ಹೇಳುವುದಾದರೆ, ಈ ಸವಾಲನ್ನು ಮೊಟ್ಟಮೊದಲು ಕಂಡಾಗ ನನಗೂ ಆಶ್ಚರ್ಯವಾಗಿತ್ತು. ಕುರ್‌ಆನ್ ಹೇಳುತ್ತದೆ:

﴿ أَفَلَا يَتَدَبَّرُونَ الْقُرْآنَ وَلَوْ كَانَ مِنْ عِنْدِ غَيْرِ اللَّهِ لَوَجَدُوا فِيهِ اخْتِلَافًا كَثِيرًا ﴾

**"ಅವರು ಈ ಕುರ್‌ಆನ್‌ನ ಬಗ್ಗೆ ಅಲೋಚಿಸುವುದಿಲ್ಲವೇ? ಇದು ಅಲ್ಲಾಹನ ಹೊರತು ಇತರರ ಬಳಿಯಿಂದಾಗಿರುತ್ತಿದ್ದರೆ ಖಂಡಿತವಾಗಿಯೂ ಅವರು ಇದರಲ್ಲಿ ಅನೇಕ ವಿರೋಧಾಭಾಸಗಳನ್ನು ಕಾಣುತ್ತಿದ್ದರು." [ಕುರ್‌ಆನ್ 4:82]**

ಇದು ಮುಸ್ಲಿಮೇತರರಿಗಿರುವ ಒಂದು ಸ್ಪಷ್ಟ ಸವಾಲಾಗಿದೆ. ಮೂಲಭೂತವಾಗಿ, ಇದು ಒಂದು ಪ್ರಮಾದವನ್ನು ಹುಡುಕಿ ತೋರಿಸುವುದರ ಕಡೆಗೆ ಅವರನ್ನು ಆಹ್ವಾನಿಸುತ್ತದೆ. ವಾಸ್ತವ ಸಂಗತಿಯೇನೆಂದರೆ, ಈ ಸವಾಲಿನ ಗಂಭೀರತೆ ಮತ್ತು ಕ್ಲಿಷ್ಟತೆಯನ್ನು ಬದಿಗಿಟ್ಟರೂ ಸಹ ಇಂತಹ ಒಂದು ಸವಾಲನ್ನು ಒಡ್ಡುವುದು ಮನುಷ್ಯ ಪ್ರಕೃತಿಗೆ ಸೇರಿದ್ದಲ್ಲ. ಮನುಷ್ಯನ ವ್ಯಕ್ತಿತ್ವದೊಂದಿಗೆ ಇಂತಹ ಒಂದು ಸವಾಲು ಹೊಂದಾಣಿಕೆಯಾಗುವುದೂ ಇಲ್ಲ. ಉದಾಹರಣೆಗೆ ಒಬ್ಬ ವ್ಯಕ್ತಿ ಶಾಲೆಯಲ್ಲಿ ಪರೀಕ್ಷೆಯೊಂದನ್ನು ಬರೆದು, ಉತ್ತರ ಪತ್ರಿಕೆಯ ಕೊನೆಯಲ್ಲಿ ಶಿಕ್ಷಕನೊಂದಿಗೆ 'ನಾನು ಈ ಪರೀಕ್ಷೆಯನ್ನು ಸಮರ್ಪಕವಾಗಿ ಬರೆದಿದ್ದೇನೆ. ಈ ಉತ್ತರ ಪತ್ರಿಕೆಯಲ್ಲಿ ಯಾವುದೇ ಪ್ರಮಾದಗಳಿಲ್ಲ. ಇದ್ದರೆ ಅದನ್ನು ತೋರಿಸಿಕೊಡಿ' ಎಂಬ ಒಂದು ಸವಾಲನ್ನು ಹಾಕುವನೇ? ಯಾರೂ ಇಂತಹ ಸವಾಲನ್ನು ಹಾಕಲಾರರು. ಯಾಕೆಂದರೆ ಒಂದು ಪ್ರಮಾದವನ್ನಾದರೂ ಕಾಣದ ವಿನಾ ತಾನು ನಿದ್ದೆ ಮಾಡಲಾರೆನು ಎಂದು ಶಿಕ್ಷಕನು ಖಂಡಿತ ತೀರ್ಮಾನಿಸಿ ಬಿಡುವನು. ಕುರ್‌ಆನ್ ಜನರನ್ನು ಸಮೀಪಿಸುವ ವಿಧಾನಗಳಲ್ಲಿ ಇದೂ ಒಂದಾಗಿದೆ.

# ಜ್ಞಾನವಿರುವವರೊಂದಿಗೆ ವಿಚಾರಿಸಿ

ಕುರ್‌ಆನ್‌ನಲ್ಲಿರುವ ಇನ್ನೊಂದು ಮನಮೋಹಕ ಶೈಲಿ ಏನೆಂದರೆ ಅದು ಓದುಗನಿಗೆ ಪದೇ ಪದೇ ಒಂದು ಸಲಹೆಯನ್ನು ನೀಡುತ್ತದೆ. ಕುರ್‌ಆನ್ ಓದುಗನಿಗೆ ಹಲವಾರು ವಿಭಿನ್ನ ವಾಸ್ತವಾಂಶಗಳ ಬಗ್ಗೆ ಮಾಹಿತಿ ನೀಡಿದ ಬಳಿಕ ಹೀಗೊಂದು ಸಲಹೆಯನ್ನು ನೀಡುತ್ತದೆ: 'ಇದರ ಬಗ್ಗೆ ಅಥವಾ ಅದರ ಬಗ್ಗೆ ನಿಮಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ, ಅಥವಾ ಇಲ್ಲಿ ಹೇಳಲಾದ ವಿಷಯದ ಬಗ್ಗೆ ನಿಮಗೆ ಸಂದೇಹವಿದ್ದಲ್ಲಿ, ನೀವು ಆ ವಿಷಯದಲ್ಲಿ ಜ್ಞಾನವಿರುವ ವರೊಂದಿಗೆ ವಿಚಾರಿಸಿರಿ.' ಇದೊಂದು ಅದ್ಭುತವಾದ ಶೈಲಿ! ಭೂಗರ್ಭಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ ಮುಂತಾದ ಅನೇಕ ವಿಷಯಗಳ ಬಗ್ಗೆ ಯಾವುದೇ ತರಬೇತಿಯನ್ನೂ ಪಡೆದಿರದ ಒಬ್ಬ ವ್ಯಕ್ತಿ, ಈ ವಿಷಯಗಳ ಬಗ್ಗೆ ಓದುಗರೊಂದಿಗೆ ಚರ್ಚಿಸಿ, ಕೊನೆಗೆ ಓದುಗನಿಗೆ ಸಂದೇಹವುಂಟಾದರೆ ಜ್ಞಾನವಿರುವವರೊಂದಿಗೆ ಆ ಬಗ್ಗೆ ವಿಚಾರಿಸಲು ಸಲಹೆ ನೀಡುವುದು ಅಸಹಜ ಪ್ರಕ್ರಿಯೆಯಾಗಿದೆ. ಕುರ್‌ಆನ್‌ನ ಈ ಸಲಹೆಯನ್ನು ಅನುಸರಿಸಿ ಅದ್ಭುತ ಸಂಶೋಧನೆಗಳನ್ನು ಮಾಡಿದ ಮುಸ್ಲಿಮರು ಎಲ್ಲ ಕಾಲಗಳಲ್ಲೂ ಇದ್ದರು. ಶತಮಾನಗಳ ಹಿಂದಿನ **ಮುಸ್ಲಿಮ್ ವಿಜ್ಞಾನಿಗಳ** ಗ್ರಂಥಗಳನ್ನು ಯಾರಾದರೂ ತೆರೆದು ನೋಡಿದರೆ ಅದರ ತುಂಬಾ ಕುರ್‌ಆನ್‌ನ ಉಲ್ಲೇಖಗಳನ್ನು ಕಾಣುವನು. ಅವರು ಇಂತಿಂತಹ ಸ್ಥಳಗಳಲ್ಲಿ ಯಾವುದನ್ನೋ ಹುಡುಕುತ್ತಾ ಸಂಶೋಧನೆ ಮಾಡುತ್ತಿದ್ದರೆಂದು ಆ ಗ್ರಂಥಗಳು ನಿರೂಪಿಸುತ್ತವೆ. ಅವರು ಇಂತಿಂತಹ ಸ್ಥಳಗಳಲ್ಲಿ ಯಾವುದನ್ನೋ ಹುಡುಕಲು ಕಾರಣ ಕುರ್‌ಆನ್ ಅವರನ್ನು ಆ ದಿಕ್ಕಿನ ಕಡೆಗೆ ಮಾರ್ಗದರ್ಶನ ಮಾಡಿದ್ದಾಗಿದೆ ಎನ್ನುವುದನ್ನು ಅವರು ದೃಢೀಕರಿಸಿದ್ದಾರೆ.

ಉದಾಹರಣೆಗೆ, **ಮನುಷ್ಯೋತ್ಪತ್ತಿಯ** ಬಗ್ಗೆ ಕುರ್‌ಆನ್ ಮಾತನಾಡುತ್ತದೆ. ತರುವಾಯ ಓದುಗನೊಂದಿಗೆ ಹೇಳುತ್ತದೆ: 'ಅದರ ಬಗ್ಗೆ ಸಂಶೋಧನೆ ಮಾಡು!' ಅದು ಓದುಗನಿಗೆ ಎಲ್ಲಿ ಹುಡುಕಬೇಕೆಂಬ ಬಗ್ಗೆ ಒಂದು ಸುಳಿವನ್ನು (hint) ನೀಡಿ ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಶೋಧಿಸಬೇಕೆಂದು ಹೇಳುತ್ತದೆ. ಇದು ಆಧುನಿಕ ಮುಸ್ಲಿಮರು ಹೆಚ್ಚಿನ ಸಂದರ್ಭಗಳಲ್ಲೂ ಕಡೆಗಣಿಸುವ ಒಂದು ವಿಷಯವಾಗಿದೆ. –ಆದರೆ ಯಾವಾಗಲೂ ಅಲ್ಲ, ಈ ಕೆಳಗಿನ ಉದಾಹರಣೆಯಲ್ಲಿ ವಿವರಿಸಿದಂತೆ...

## ಭ್ರೂಣಶಾಸ್ತ್ರ

ಕೆಲವು ವರ್ಷಗಳ ಹಿಂದೆ, ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಕೆಲವು ಮಂದಿ ಗರ್ಭದಲ್ಲಿ ಮನುಷ್ಯನ ಬೆಳವಣಿಗೆಯನ್ನು ಅಧ್ಯಯನ ಮಾಡುವ ಭ್ರೂಣಶಾಸ್ತ್ರದ (embryology) ಬಗ್ಗೆ ಪ್ರಸ್ತಾಪಿಸುವ ಕುರ್‌ಆನ್‌ನ ಎಲ್ಲ ಸೂಕ್ತಿಗಳನ್ನೂ ಒಟ್ಟುಗೂಡಿಸಿದರು. ಅವರು ಹೇಳಿದರು: 'ಕುರ್‌ಆನ್ ಹೇಳುವ ವಿಷಯಗಳು ಇಲ್ಲಿವೆ. ಇವು ಸತ್ಯವೇ?' ಜ್ಞಾನವಿರುವವರೊಂದಿಗೆ ವಿಚಾರಿಸಿರಿ ಎಂಬ ಕುರ್‌ಆನಿನ ಸಲಹೆಯನ್ನು ಅವರು ಅಕ್ಷರಶಃ ಪಾಲಿಸಿದರು. ಅದಕ್ಕಾಗಿ ಅವರು ಟೊರೊಂಟೋ ವಿಶ್ವವಿದ್ಯಾಲಯದಲ್ಲಿ ಭ್ರೂಣಶಾಸ್ತ್ರದ ಉಪನ್ಯಾಸಕ ರಾಗಿರುವ ಮುಸ್ಲಿಮೇತರ ವ್ಯಕ್ತಿಯೊಬ್ಬರನ್ನು ಆರಿಸಿದರು. ಆ ಉಪನ್ಯಾಸಕರ ಹೆಸರು ಕೀತ್ ಮೂರ್ (Keith Moore). ಅವರು ಭ್ರೂಣಶಾಸ್ತ್ರದ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿದ್ದರು ಮತ್ತು ಆ ವಿಷಯದಲ್ಲಿ ಜಗತ್ತಿನಲ್ಲಿಯೇ ಹೆಚ್ಚು ಪರಿಣತರಾಗಿದ್ದರು. ಅವರು ಆ ಉಪನ್ಯಾಸಕರನ್ನು ರಿಯಾದ್‌ಗೆ

ಆಹ್ವಾನಿಸಿ ಹೇಳಿದರು: 'ನೀವು ಪರಿಣತಿ ಹೊಂದಿರುವ ವಿಷಯದ ಬಗ್ಗೆ ಕುರ್‌ಆನ್ ಹೀಗೆನ್ನುತ್ತದೆ. ಇದು ಸತ್ಯವೇ? ನೀವೇನೆನ್ನುತ್ತೀರಿ?'

ಆ ಉಪನ್ಯಾಸಕರು ರಿಯಾದ್‌ನಲ್ಲಿದ್ದ ವೇಳೆ ಭಾಷಾಂತರ ಹಾಗೂ ಮತ್ತಿತರ ಅವರಿಗೆ ಬೇಕಾದ ಸಕಲ ಸಹಾಯ ಸಹಕಾರಗಳನ್ನೂ ಅವರು ಒದಗಿಸಿದರು. ಆ ಉಪನ್ಯಾಸಕರು ಏನನ್ನು ಕಂಡರೋ ಅದರ ಬಗ್ಗೆ ಅವರು ಎಷ್ಟರ ಮಟ್ಟಿಗೆ ಅಚ್ಚರಿಪಟ್ಟರೆಂದರೆ ಅವರು ತಮ್ಮ ಪಠ್ಯಪುಸ್ತಕಗಳನ್ನೇ ಬದಲಾಯಿಸಿದರು. ವಾಸ್ತವವಾಗಿ, ಅವರ ಪುಸ್ತಕಗಳ ಪೈಕಿ ಒಂದಾದ *Before We Are Born...* ಎಂಬ ಪುಸ್ತಕದ ಎರಡನೇ ಮುದ್ರಣದಲ್ಲಿ, ಅದರ history of embryology ಎಂಬ ಅಧ್ಯಾಯದಲ್ಲಿ, ಮೊದಲ ಮುದ್ರಣದಲ್ಲಿ ಇರದ ಹೆಚ್ಚುವರಿ ವಿಷಯಗಳನ್ನು ಸೇರಿಸಿದರು. ಯಾಕೆಂದರೆ ಅವರು ಕುರ್‌ಆನ್‌ನಲ್ಲಿ ಏನನ್ನು ಕಂಡರೋ ಅದು ಅದರ ಕಾಲಕ್ಕಿಂತಲೂ ಎಷ್ಟೋ ಮುಂದುವರಿದಿತ್ತು. ಯಾರು ಕುರ್‌ಆನಿನಲ್ಲಿ ವಿಶ್ವಾಸವಿಡುತ್ತಾರೋ ಅವರು ಇತರ ಜನರು ಅರಿಯದಿರುವುದನ್ನು ಅರಿತವರಾಗಿದ್ದರು.

ಒಂದು ದೂರದರ್ಶನ ಪ್ರಾತ್ಯಕ್ಷಿಕೆಗಾಗಿ ಡಾ। ಕೀತ್ ಮೂರ್‌ರನ್ನು ಸಂದರ್ಶನ ಮಾಡಬೇಕಾದ ಅವಕಾಶ ನನಗೆ ಲಭ್ಯವಾಯಿತು. ನಾವು ಭ್ರೂಣಶಾಸ್ತ್ರದ ಬಗ್ಗೆ ಬಹಳ ಹೊತ್ತು ಮಾತನಾಡಿದೆವು. ನಮ್ಮ ಮಾತುಕತೆಯು ಸ್ಲೈಡ್ ಶೋಗಳ ಮೂಲಕವೂ ನಡೆದಿತ್ತು. ಅವರು ಹೇಳಿದರು: 'ಮನುಷ್ಯ ಬೆಳವಣಿಗೆಯ ಬಗ್ಗೆ ಕುರ್‌ಆನ್ ಏನು ಹೇಳುತ್ತದೋ ಅದು ತೀರಾ ಇತ್ತೀಚಿನ ಮೂವತ್ತು ವರ್ಷಗಳ ಹಿಂದಿನವರೆಗೆ ಮನುಷ್ಯರಿಗೆ ಅಜ್ಞಾತವಾಗಿತ್ತು.' ವಾಸ್ತವವಾಗಿ, ಅವುಗಳ ಪೈಕಿ ಅವರು ವಿಶೇಷವಾಗಿ ಬೊಟ್ಟು ಮಾಡಿ ಹೇಳಿದ್ದು ಕುರ್‌ಆನ್ ಮನುಷ್ಯನನ್ನು **'ಜಿಗಣೆಯಂತಹ ಮುದ್ದೆ'** *(ಅಲಕಃ)* ಎಂದು ಚಿತ್ರಿಸಿದ ವಿಷಯನ್ನಾಗಿತ್ತು. [ಕುರ್‌ಆನ್ 40/67]. ಇದು ಅವರಿಗೆ ಒಂದು ಹೊಸ ವಿಷಯವಾಗಿತ್ತು. ಆದರೆ ಅವರು ಅದನ್ನು ಪರೀಕ್ಷಿಸಿದಾಗ ಅದನ್ನು ಸತ್ಯವೆಂದು ಮನಗಂಡರು ಮತ್ತು ತಮ್ಮ ಪಠ್ಯಪುಸ್ತಕದಲ್ಲಿ ಅದನ್ನು ಸೇರಿಸಿದರು. ಅವರು ಹೇಳಿದರು: 'ನಾನು

ಇದಕ್ಕೆ ಮುಂಚೆ ಈ ಬಗ್ಗೆ ಆಲೋಚಿಸಿರಲೇ ಇಲ್ಲ.’ ಅವರು ನೇರವಾಗಿ ‘ಪ್ರಾಣಿಶಾಸ್ತ್ರ ವಿಭಾಗ’ (Department of Zoology)ಕ್ಕೆ ತೆರಳಿ ಜಿಗಣೆಯ ಚಿತ್ರವೊಂದನ್ನು ಕೇಳಿ ಪಡೆದರು. ಅವರು ಆ ಚಿತ್ರವನ್ನು ನೋಡಿದಾಗ ಅದು ಮಾನವ ಭ್ರೂಣದಂತೆಯೇ ಇತ್ತು. ಆದ್ದರಿಂದ ಆ ಎರಡು ಚಿತ್ರಗಳನ್ನು (ಭ್ರೂಣ ಮತ್ತು ಜಿಗಣೆ) ತನ್ನ ಪಠ್ಯಪುಸ್ತಕಗಳಲ್ಲಿ ಸೇರಿಸಿಕೊಳ್ಳಲು ಅವರು ನಿರ್ಧರಿಸಿದರು.

ಈ ಮೇಲಿನ ಉದಾಹರಣೆಯಲ್ಲಿ ತಿಳಿಸಲಾದ ಪ್ರಕಾರ ಕುರ್‌ಆನ್‌ನಲ್ಲಿರುವ ಮಾಹಿತಿಯನ್ನು ಸಂಶೋಧನೆ ಮಾಡಿದ್ದು ಮುಸ್ಲಿಮೇತರನಾಗಿದ್ದರೂ ಅದು ಸಿಂಧುವಾಗಿದೆ. ಯಾಕೆಂದರೆ ಸಂಶೋಧನೆ ಮಾಡಲಾದ ಆ ವಿಷಯದಲ್ಲಿ ಅತಿ ಹೆಚ್ಚು ಜ್ಞಾನವಿರುವ ವ್ಯಕ್ತಿ ಅವರೇ ಆಗಿದ್ದರು. ಕುರ್‌ಆನ್ ಭ್ರೂಣಶಾಸ್ತ್ರದ ಬಗ್ಗೆ ಏನು ಹೇಳುತ್ತದೋ ಅದು ಸತ್ಯವಾಗಿದೆಯೆಂದು ಯಾರಾದರೂ ಒಬ್ಬ ಸಾಮಾನ್ಯ ವ್ಯಕ್ತಿ ಹೇಳಿದರೆ ಜಗತ್ತು ಅವನ ಮಾತಿಗೆ ಬೆಲೆ ಕೊಡದು. ಜನರು ವಿದ್ವಾಂಸರಿಗೆ ನೀಡುವ ಉನ್ನತ ಪದವಿ, ಗೌರವ ಮತ್ತು ಪರಿಗಣನೆಯಿಂದಾಗಿ ಅವರು ಯಾವುದಾದರೂ ಒಂದು ವಿಷಯದ ಬಗ್ಗೆ ಸಂಶೋಧನೆ ಮಾಡಿ ಏನಾದರೊಂದು ತೀರ್ಮಾನಕ್ಕೆ ಬಂದರೆ ಆ ತೀರ್ಮಾನವು ಸಮಂಜಸ ವಾದುದೇ ಆಗಿದೆಯೆಂದು ಜನ ನಂಬುತ್ತಾರೆ.

## ಸಂದೇಹವಾದಿಯ ಪ್ರತಿಕ್ರಿಯೆ

ಡಾ। ಮೂರ್ ವೈದ್ಯಕೀಯ ಭ್ರೂಣಶಾಸ್ತ್ರದ (Clinical Embryology) ಬಗ್ಗೆಯೂ ಒಂದು ಗ್ರಂಥವನ್ನು ರಚಿಸಿದ್ದಾರೆ. ಅವರು ಈ ಮಾಹಿತಿಯನ್ನು ಟೊರೊಂಟೋದಲ್ಲಿ ಪ್ರಕಟಿಸಿದಾಗ ಅದು ಕೆನಡದಾದ್ಯಂತ ತಲ್ಲಣವನ್ನು ಹುಟ್ಟು

ಹಾಕಿತು. ಕೆನಡದ ಉದ್ದಗಲಗಳಲ್ಲಿ ಕೆಲವು ಪತ್ರಿಕೆಗಳು ತಮ್ಮ ಮುಖಪುಟದಲ್ಲೇ ಅದನ್ನು ಪ್ರಕಟಿಸಿದವು. ಕೆಲವು ಶೀರ್ಷಿಕೆಗಳಂತೂ ಅತ್ಯಂತ ಹಾಸ್ಯಮಯ ವಾಗಿದ್ದವು. ಉದಾಹರಣೆಗೆ ಒಂದು ಶೀರ್ಷಿಕೆ ಹೀಗಿತ್ತು: "SURPRISING THING FOUND IN ANCIENT PRAYER BOOK!" 'ಆಶ್ಚರ್ಯಕರ ವಿಷಯವೊಂದನ್ನು ಪ್ರಾಚೀನ ಪ್ರಾರ್ಥನಾ ಗ್ರಂಥದಲ್ಲಿ ಸಂಶೋಧಿಸಲಾಗಿದೆ.' ವಿಷಯದ ಆಳವನ್ನು ಜನರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದಿಲ್ಲ ಎನ್ನುವುದು ಈ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ವಾಸ್ತವವೇನೆಂದರೆ, ಒಬ್ಬ ಪತ್ರಕರ್ತ ಪ್ರೊ। ಮೂರ್‌ರೊಂದಿಗೆ, 'ಬಹುಶಃ ಅರಬರು ಈ ವಿಷಯಗಳ ಬಗ್ಗೆ –ಭ್ರೂಣದ ವಿವರಣೆ, ಅದರ ರೂಪ, ಅದು ಹೇಗೆ ಬದಲಾವಣೆ ಗೊಳ್ಳುತ್ತದೆ ಮತ್ತು ಹೇಗೆ ಬೆಳೆಯುತ್ತದೆ ಇತ್ಯಾದಿಗಳ ಬಗ್ಗೆ– ಅರಿತಿರಬಹು ದೆಂದು ತಾವು ಭಾವಿಸುವುದಿಲ್ಲವೇ? ಬಹುಶಃ ಅವರು ವಿಜ್ಞಾನಿಗಳಲ್ಲದಿದ್ದರೂ, ಅವರ ಪೈಕಿ ಕೆಲವರು ತಮಗೆ ತೋಚಿದಂತೆ ದೇಹಗಳನ್ನು ಒರಟಾಗಿ ಛೇದಿಸಿ, ಪರೀಕ್ಷಿಸಿ ಇವೆಲ್ಲವನ್ನೂ ಅರಿತುಕೊಂಡಿರಬಹುದಾದ ಸಾಧ್ಯತೆಯಿಲ್ಲವೇ?' ಎಂದು ವಿಚಾರಿಸಿದನು. ಆದರೆ ಆತ (ಪತ್ರಕರ್ತ) ಬಹಳ ಪ್ರಾಮುಖ್ಯತೆಯಿರುವ ಅಂಶವೊಂದನ್ನು ಹೇಳಲು ಮರೆತಿದ್ದಾನೆ ಎನ್ನುವುದನ್ನು ಪ್ರೊ। ಮೂರ್ ತಕ್ಷಣ ಬೊಟ್ಟು ಮಾಡಿದರು. ಅದೇನೆಂದರೆ ಇಲ್ಲಿ ಸ್ಲೈಡ್ ಶೋ ಮೂಲಕ ತೋರಿಸಲಾದ ಭ್ರೂಣಗಳ ಚಿತ್ರಗಳೆಲ್ಲವೂ ಸೂಕ್ಷ್ಮದರ್ಶಕದ (Microscope) ಮೂಲಕ ಚಿತ್ರಿಸಿದ್ದಾಗಿದೆ. ಪ್ರೊ। ಮೂರ್ ಹೇಳಿದರು: 'ಹದಿನಾಲ್ಕು ಶತಮಾನಗಳ ಹಿಂದೆ ಯಾರಾದರೂ ಭ್ರೂಣಶಾಸ್ತ್ರವನ್ನು ಸಂಶೋಧಿಸಲು ಪ್ರಯತ್ನಿಸಿದ್ದರೆ ಅದರಲ್ಲೇನೂ ಅಚ್ಚರಿಯಿಲ್ಲ. ಆದರೆ ಆಗ ಅವನು ನೋಡಬೇಕಾದುದು ಬರಿಗಣ್ಣಿನಿಂದಲೇ ಆಗಿದೆ!'

ಭ್ರೂಣದ ಬಗ್ಗೆ ಕುರ್‌ಆನ್ ನೀಡುವ ವಿವರಣೆಗಳೆಲ್ಲವೂ ಅದು ಅತಿ ಚಿಕ್ಕದಾಗಿರುವ ಅಂದರೆ ಬರಿಗಣ್ಣಿನ ಮೂಲಕ ನೋಡಲು ಅಸಾಧ್ಯವಾಗಿರುವ ಹಂತಕ್ಕೆ ಸಂಬಂಧಿಸಿದ್ದಾಗಿದೆ. ಆದ್ದರಿಂದಲೇ ಅದನ್ನು ನೋಡಲು ಸೂಕ್ಷ್ಮದರ್ಶಕದ ಅಗತ್ಯವಿದೆ. ಅಂತಹ ಒಂದು ಉಪಕರಣವನ್ನು ಕೇವಲ

ಇನ್ನೂರು ವರ್ಷಗಳ ಹಿಂದೆಯಷ್ಟೇ ಕಂಡುಹಿಡಿಯಲಾಗಿರುವುದರಿಂದ, ಡಾ। ಮೂರ್ ವ್ಯಂಗ್ಯವಾಗಿ ಹೇಳುತ್ತಾರೆ: 'ಬಹುಶಃ ಹದಿನಾಲ್ಕು ಶತಮಾನಗಳ ಹಿಂದೆ ಯಾರೋ ಒಬ್ಬರು ರಹಸ್ಯವಾಗಿ ಒಂದು ಸೂಕ್ಷ್ಮದರ್ಶಕವನ್ನು ಹೊಂದಿದ್ದು, ಅವರು ಅದರ ಸಹಾಯದಿಂದ ಸ್ವಲ್ಪವೂ ಪ್ರಮಾದವಿಲ್ಲದ ಈ ಸಂಶೋಧನೆಗಳನ್ನು ಮಾಡಿ, ತರುವಾಯ ಅದನ್ನು ಹೇಗೋ ಮುಹಮ್ಮದ್‌ರಿಗೆ ಕಲಿಸಿ, ಅವರು ಈ ಮಾಹಿತಿಯನ್ನು ತಮ್ಮ ಗ್ರಂಥದಲ್ಲಿ ಸೇರಿಸಿಕೊಳ್ಳುವಂತೆ ನೋಡಿಕೊಂಡಿದ್ದಾರೆ. ತರುವಾಯ ಅವರು ಆ ಸೂಕ್ಷ್ಮದರ್ಶಕವನ್ನು ನಾಶ ಮಾಡಿ ಅದನ್ನೊಂದು ರಹಸ್ಯವಾಗಿಯೇ ಉಳಿಸಿದ್ದಾರೆ. ನೀವಿದನ್ನು ನಂಬುವಿರಾ? ಸ್ಪಷ್ಟ ಪುರಾವೆಯನ್ನು ಮಂಡಿಸಿದ ವಿನಾ ಇದನ್ನು ನೀವು ನಂಬಲಾರಿರಿ. ಯಾಕೆಂದರೆ ಇದೊಂದು ಹಾಸ್ಯಾಸ್ಪದ ಸಂಗತಿಯಾಗಿದೆ.' ತರುವಾಯ 'ಕುರ್‌ಆನ್‌ನಲ್ಲಿರುವ ಈ ಮಾಹಿತಿಯನ್ನು ನೀವು ಹೇಗೆ ವಿವರಿಸುವಿರಿ' ಎಂದು ಡಾ। ಮೂರ್‌ರೊಂದಿಗೆ ಕೇಳಲಾದಾಗ ಅವರು ಹೇಳಿದರು: 'ಅದು ದೈವಿಕ ಮೂಲದಿಂದಾಗಿರಲು ಮಾತ್ರ ಸಾಧ್ಯ!'

## ಭೂಗರ್ಭಶಾಸ್ತ್ರ

ಪ್ರೊ। ಮೂರ್‌ರ ಸಹೋದ್ಯೋಗಿಗಳ ಪೈಕಿ ಒಬ್ಬರಾದ ಮಾರ್ಶಲ್ ಜಾನ್ಸನ್ ಟೊರೊಂಟೋ ವಿಶ್ವವಿದ್ಯಾಲಯದಲ್ಲಿ ಭೂಗರ್ಭಶಾಸ್ತ್ರದ ಬಗ್ಗೆ ಆಳವಾದ ಸಂಶೋಧನೆ ನಡೆಸುತ್ತಿದ್ದಾರೆ. ಭ್ರೂಣಶಾಸ್ತ್ರದ ಬಗ್ಗೆ ಕುರ್‌ಆನಿನ ನಿರೂಪಣೆಗಳು ಅತ್ಯಂತ ಕರಾರುವಾಕ್ಕಾಗಿವೆ ಎಂಬ ವಾಸ್ತವದ ಬಗ್ಗೆ ಅವರು ಅತೀವ ಆಸಕ್ತಿ ತಾಳಿದರು. ಆದ್ದರಿಂದ ತನ್ನ ವಿಷಯವಾದ ಭೂಗರ್ಭಶಾಸ್ತ್ರದ ಬಗ್ಗೆಯಿರುವ ಕುರ್‌ಆನಿನ ನಿರೂಪಣೆಗಳನ್ನೆಲ್ಲ ಸಂಗ್ರಹಿಸುವಂತೆ ಅವರು ಮುಸ್ಲಿಮರೊಂದಿಗೆ ವಿನಂತಿಸಿದರು. ಪುನಃ ಅವರ ಸಂಶೋಧನೆಯಿಂದಾಗಿ ಜನರು

ಆಶ್ಚರ್ಯಚಕಿತರಾದರು. ಕುರ್‌ಆನಿನಲ್ಲಿ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿರುವುದರಿಂದ ಪ್ರತಿಯೊಂದು ವಿಷಯವನ್ನೂ ಹೀರಿ ತೆಗೆಯಲು ಅಗಾಧ ಸಮಯ ಬೇಕಾದೀತು. ಕುರ್‌ಆನ್ ಹಲವಾರು ವಿಷಯಗಳ ಬಗ್ಗೆ ಸ್ಪಷ್ಟ ಮತ್ತು ಸಂಕ್ಷಿಪ್ತ ಹೇಳಿಕೆಗಳನ್ನು ನೀಡಿ ಅದರ ಸತ್ಯಾಸತ್ಯತೆಯ ಬಗ್ಗೆ ಆ ವಿಷಯಗಳಲ್ಲಿ ಸಂಶೋಧನಾ ನಿರತರಾಗಿರುವವರು ಸಂಶೋಧನೆ ಮಾಡಬೇಕೆಂದು ಓದುಗನನ್ನು ಉಪದೇಶಿಸುತ್ತದೆ. ಈಗಾಗಲೇ ಹೇಳಲಾದ ಭ್ರೂಣಶಾಸ್ತ್ರ ಮತ್ತು ಭೂಗರ್ಭಶಾಸ್ತ್ರದ ವಿಷಯದಲ್ಲಿ ಕುರ್‌ಆನ್‌ನ ನಿರೂಪಣೆಗಳು ಸ್ಪಷ್ಟ ಮತ್ತು ಸಾಚಾ ಆಗಿವೆಯೆಂದು ರುಜುವಾತಾಗಿವೆ.

## ನೀವು ಇದಕ್ಕಿಂತ ಮುಂಚೆ ಇದನ್ನು ಅರಿತಿರಲಿಲ್ಲ!

ನಿಸ್ಸಂದೇಹವಾಗಿಯೂ, ಬೇರೆಲ್ಲೂ ಕಾಣಲಾಗದಂತಹ ಒಂದು ವಿಶಿಷ್ಟ ಶೈಲಿ ಕುರ್‌ಆನ್‌ನಲ್ಲಿದೆ. ಕುರ್‌ಆನ್ ಯಾವುದಾದರೂ ಒಂದು ಮಾಹಿತಿಯನ್ನು ನೀಡುವಾಗಲೆಲ್ಲ ಓದುಗರೊಂದಿಗೆ 'ನೀವು ಇದಕ್ಕಿಂತ ಮುಂಚೆ ಇದನ್ನು ಅರಿತಿರಲಿಲ್ಲ.' ಎಂದು ಹೇಳುವುದು ಆಸಕ್ತಿದಾಯಕವಾಗಿದೆ. ನಿಜ, ಇಂತಹ ಒಂದು ಹಕ್ಕುವಾದವನ್ನು ಮಂಡಿಸುವ ಒಂದೇ ಒಂದು ಧರ್ಮಗ್ರಂಥವೂ ಅಸ್ತಿತ್ವದಲ್ಲಿಲ್ಲ. ಜನರ ಬಳಿಯಿರುವ ಇತರೆಲ್ಲ ಪ್ರಾಚೀನ ಬರಹಗಳು ಮತ್ತು ಕೃತಿಗಳು ಬಹಳ ಮಾಹಿತಿಗಳನ್ನು ನೀಡುತ್ತವೆಯಾದರೂ, ಅವೆಲ್ಲವೂ ಆ ಮಾಹಿತಿ ಎಲ್ಲಿಂದ ಲಭ್ಯವಾಯಿತು ಎಂಬ ವಿಶದೀಕರಣವನ್ನೂ ನೀಡುತ್ತವೆ.

ಉದಾಹರಣೆಗೆ, **ಬೈಬಲ್** ಪ್ರಾಚೀನ ಇತಿಹಾಸದ ಬಗ್ಗೆ ಚರ್ಚಿಸುವಾಗಲೆಲ್ಲ, ಈ ರಾಜ ಇಲ್ಲಿ ಬದುಕಿದ್ದನು, ಇವನು ಇಂತಹ ಒಂದು ಯುದ್ಧದಲ್ಲಿ ಪಾಲ್ಗೊಂಡಿದ್ದನು, ಇವನಿಗೆ ಅನೇಕ ಮಕ್ಕಳಿದ್ದರು ಎಂಬಿತ್ಯಾದಿ ವಿಷಯಗಳನ್ನು

ನಿರೂಪಿಸುತ್ತವೆ. ಆದರೆ ಅದರೊಂದಿಗೆ ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ಬೇಕಾದರೆ ಇಂತಿಂತಹ ಪುಸ್ತಕವನ್ನು ಓದಿರಿ, ಯಾಕೆಂದರೆ ಈ ಮಾಹಿತಿಗಳು ಲಭ್ಯವಾಗಿದ್ದು ಇಂತಿಂತಹ ಪುಸ್ತಕದಿಂದಾಗಿದೆ ಎಂದು ಅದು ಎಲ್ಲ ಕಡೆಯೂ ನಮೂದಿಸುತ್ತದೆ. ಈ ಪರಿಕಲ್ಪನೆಗೆ ವ್ಯತಿರಿಕ್ತವಾಗಿ ಕುರ್‌ಆನ್ ಓದುಗರಿಗೆ ಒಂದು ವಿಷಯದ ಬಗ್ಗೆ ಮಾಹಿತಿ ನೀಡುವಾಗ ಈ ಮಾಹಿತಿಯು ಹೊಸದಾಗಿದೆ ಎನ್ನುತ್ತದೆ. ಹಾಗೆಯೇ, ಇಲ್ಲಿ ಒದಗಿಸಲಾದ ಮಾಹಿತಿಗಳ ಬಗ್ಗೆ ಸಂಶೋಧನೆ ಮಾಡಿ ಅದರ ಸಾಚಾತನವನ್ನು ಪರೀಕ್ಷಿಸಬೇಕೆಂಬ ಸಲಹೆಯೂ ಅಲ್ಲಿರುತ್ತದೆ. ಇಂತಹ ಒಂದು ಪರಿಕಲ್ಪನೆಯನ್ನು ಹದಿನಾಲ್ಕು ಶತಮಾನಗಳ ಹಿಂದೆ ಕೂಡ ಮುಸ್ಲಿಮೇತರರು ಸವಾಲಾಗಿ ಸ್ವೀಕರಿಸಿರಲಿಲ್ಲವೆಂಬುದು ಆಸಕ್ತಿಯನ್ನು ಕೆರಳಿಸುತ್ತದೆ. ವಾಸ್ತವವಾಗಿ ಮಕ್ಕಾ ನಿವಾಸಿಗಳು ಮುಸ್ಲಿಮರನ್ನು ಬಹಳ ದ್ವೇಷಿಸುತ್ತಿದ್ದರೂ ಕೂಡ, ಅವರು ಇಂತಹ ಹೊಸ ಮಾಹಿತಿಗಳನ್ನು ಪದೇ ಪದೇ ಆಲಿಸಿದಾಗಲೆಲ್ಲ 'ಇದು ಹೊಸದೇನೂ ಅಲ್ಲ, ಮುಹಮ್ಮದ್‌ರಿಗೆ ಈ ಮಾಹಿತಿ ಎಲ್ಲಿಂದ ಲಭ್ಯವಾಯಿತೆಂದು ನಮಗೆ ಗೊತ್ತಿದೆ, ನಾವದನ್ನು ಶಾಲೆಯಲ್ಲಿ ಕಲಿತಿದ್ದೇವೆ' ಎಂದು ಅವರಾರೂ ಹೇಳಿಲ್ಲ. ಅದರ ಸಾಚಾತನ ವನ್ನು ಅವರೊಂದು ಸವಾಲಾಗಿ ಸ್ವೀಕರಿಸಲೇ ಇಲ್ಲ. ಯಾಕೆಂದರೆ ಅವೆಲ್ಲವೂ ಹೊಸ ಮಾಹಿತಿಗಳಾಗಿದ್ದವು!

## ಸಾಚಾತನದ ಪುರಾವೆ: ಒಂದು ಸಮೀಪನೆ

ಕುರ್‌ಆನ್ ಅನೇಕ, ಅನೇಕ ವಿಷಯಗಳ ಬಗ್ಗೆ ಪ್ರಮಾದಮುಕ್ತವಾಗಿದೆಯೆಂದು ಇಲ್ಲಿ ಒತ್ತು ನೀಡಿ ಹೇಳಬೇಕಾಗಿದೆ. ಆದರೆ ಪ್ರಮಾದಮುಕ್ತತೆಯು ಒಂದು ಗ್ರಂಥವನ್ನು ದೈವಿಕ ಗ್ರಂಥವೆಂದು ರುಜುವಾತುಪಡಿಸುವುದಿಲ್ಲ. ವಾಸ್ತವವಾಗಿ, ಪ್ರಮಾದಮುಕ್ತತೆಯು ದೈವಿಕ ಸಂದೇಶವನ್ನು ಪರೀಕ್ಷಿಸುವುದಕ್ಕಿರುವ

ಒರೆಗಲ್ಲುಗಳಲ್ಲಿ ಒಂದು ಮಾತ್ರವಾಗಿದೆ. ಉದಾಹರಣೆಗೆ: ದೂರವಾಣಿ ಪುಸ್ತಕವು ಪ್ರಮಾದಮುಕ್ತವಾಗಿದೆ ಎಂಬುದು ಆ ಪುಸ್ತಕವನ್ನು ದೈವಿಕವೆಂದು ರುಜುವಾತುಪಡಿಸುವುದಿಲ್ಲ. ಇಲ್ಲಿರುವ ಪ್ರಮುಖ ಸಮಸ್ಯೆಯೇನೆಂದರೆ ಕುರ್‌ಆನಿನಲ್ಲಿರುವ ಮಾಹಿತಿಗಳ ಮೂಲದ ಬಗ್ಗೆ ಒಬ್ಬನು ಕೆಲವು ಪುರಾವೆಗಳನ್ನು ಸ್ಥಾಪಿಸಬೇಕಾಗಿದೆ. ಇಲ್ಲಿ ಪ್ರಾಮುಖ್ಯತೆಯು ಇನ್ನೊಂದು ದಿಕ್ಕಿನಲ್ಲಿದೆ. ಅಂದರೆ ಪುರಾವೆ ನೀಡಬೇಕಾದ ಹೊರೆಯು ಓದುಗರ ಮೇಲಿದೆ. ಸೂಕ್ತ ಪುರಾವೆಯ ಅನುಪಸ್ಥಿತಿಯಲ್ಲಿ ಕುರ್‌ಆನಿನ ಸಾಚಾತನವನ್ನು ನಿರಾಕರಿಸಲು ಒಬ್ಬ ವ್ಯಕ್ತಿಗೆ ಸಾಧ್ಯವಿಲ್ಲ. ಯಾರಾದರೂ ಕುರ್‌ಆನಿನಲ್ಲಿ ಯಾವುದಾದರೂ ಪ್ರಮಾದವನ್ನು ಕಂಡರೆ ಅದನ್ನು ಅನರ್ಹಗೊಳಿಸುವ ಹಕ್ಕು ಅವರಿಗಿದೆ. ಇದನ್ನು ಕುರ್‌ಆನ್ ಸ್ವತಃ ಪ್ರೇರೇಪಿಸುತ್ತದೆ.

ಒಮ್ಮೆ ನಾನು ದಕ್ಷಿಣ ಆಫ್ರಿಕಾದಲ್ಲಿ ಒಂದು ಭಾಷಣ ಮಾಡಿ ಮುಗಿಸಿದಾಗ ಒಬ್ಬ ವ್ಯಕ್ತಿ ನನ್ನ ಬಳಿಗೆ ಬಂದನು. ನಾನು ಏನು ಹೇಳಿದ್ದೆನೋ ಅದರ ಬಗ್ಗೆ ಅವನು ಬಹಳ ಕೋಪಗೊಂಡಿದ್ದನು. ಅವನು ಉದ್ಗರಿಸಿದನು: ‘ಇಂದು ರಾತ್ರಿ ನಾನು ಮನೆಗೆ ತೆರಳಿ ಕುರ್‌ಆನಿನಲ್ಲಿ ಒಂದು ಪ್ರಮಾದವನ್ನು ಕಂಡುಹಿಡಿಯುತ್ತೇನೆ.’ ನಾನು ಹೇಳಿದೆ: ‘ಅಭಿನಂದನೆಗಳು! ನೀವು ಹೇಳಿದ ಅತ್ಯಂತ ಬುದ್ಧಿವಂತ ಮಾತು ಇದಾಗಿದೆ!’ ಕುರ್‌ಆನಿನ ಸಾಚಾತನದ ಬಗ್ಗೆ ಅನುಮಾನ ಪಡುವವರೊಂದಿಗೆ ಮುಸ್ಲಿಮರು ಸ್ವೀಕರಿಸಬೇಕಾದ ಸಮೀಪನೆ ಇದಾಗಿದೆ. ಯಾಕೆಂದರೆ ಸ್ವತಃ ಕುರ್‌ಆನ್ ಈ ಸವಾಲನ್ನು ಒಡ್ಡುತ್ತದೆ. ಹೀಗೆ ಈ ಸವಾಲನ್ನು ಅನಿವಾರ್ಯವಾಗಿ ಸ್ವೀಕರಿಸಿ, ತರುವಾಯ ಅದು ಸತ್ಯವಾಗಿದೆ ಯೆಂದು ಕಂಡುಕೊಂಡ ಬಳಿಕ ಈ ಜನರು ಅದನ್ನು ನಂಬುವರು. ಯಾಕೆಂದರೆ ಅದನ್ನು ಅನರ್ಹಗೊಳಿಸಲು ಅವರಿಗೆ ಸಾಧ್ಯವಾಗದು. ವಾಸ್ತವವಾಗಿ ಕುರ್‌ಆನ್ ಅವರ ಗೌರವವನ್ನು ಸಂಪಾದಿಸುತ್ತದೆ. ಯಾಕೆಂದರೆ ಅದರ ಸಾಚಾತನವನ್ನು ಪರೀಕ್ಷಿಸುವ ಅವಕಾಶವು ಅವರಿಗೆ ಲಭ್ಯವಾಗುತ್ತದೆ.

ಕುರ್‌ಆನಿನ ಸಾಚಾತನಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪುನರುಚ್ಛರಿಸಲಾಗದ ಒಂದು ಪ್ರಮುಖ ವಿಷಯವೇನೆಂದರೆ ಒಬ್ಬ ವ್ಯಕ್ತಿಗೆ ಒಂದು ವಿದ್ಯಮಾನವನ್ನು ಸ್ವತಃ ವಿವರಿಸಲು ಸಾಧ್ಯವಾಗುವುದಿಲ್ಲ ಎಂಬುದು ಆ ವಿದ್ಯಮಾನದ ಅಸ್ತಿತ್ವವನ್ನು ಅಥವಾ ಬೇರೊಬ್ಬ ವ್ಯಕ್ತಿಗೆ ಅದನ್ನು ವಿವರಿಸಲು ಸಾಧ್ಯವಾಗುವುದನ್ನು ಅಂಗೀಕರಿಸಲು ಅವನನ್ನು ಅನಿವಾರ್ಯಗೊಳಿಸುವುದಿಲ್ಲ. ನಿರ್ದಿಷ್ಟವಾಗಿ ಹೇಳುವುದಾದರೆ, ಒಬ್ಬ ವ್ಯಕ್ತಿಗೆ ಒಂದು ವಿಷಯವನ್ನು ವಿವರಿಸಲು ಸಾಧ್ಯವಿಲ್ಲ ಎನ್ನುವುದು ಇನ್ನೊಬ್ಬ ವ್ಯಕ್ತಿಯ ವಿವರಣೆಯನ್ನು ಸ್ವೀಕರಿಸಬೇಕೆಂಬುದನ್ನು ಕಡ್ಡಾಯಗೊಳಿಸುವುದಿಲ್ಲ. ಆದರೆ ಬೇರೊಬ್ಬರ ವಿವರಣೆಯನ್ನು ಸ್ವೀಕರಿಸಲು ನಿರಾಕರಿಸುವ ವ್ಯಕ್ತಿಯ ಮೇಲೆ ಅವನೇ ಸ್ವತಃ ಅನುಕೂಲಕರವಾದ ಉತ್ತರವನ್ನು ಕಂಡುಕೊಳ್ಳುವಂತೆ ಪುರಾವೆಯ ಹೊರೆಯು ಆತನ ಕಡೆಗೆ ತಿರುಗುತ್ತದೆ. ಈ ಸಾಮಾನ್ಯ ಸಿದ್ಧಾಂತವು ಬದುಕಿನ ಅನೇಕ ಪರಿಕಲ್ಪನೆಗಳಿಗೆ ಅನ್ವಯಿಸುತ್ತದೆ. ಆದರೆ ಅದು ಕುರ್‌ಆನಿನ ಸವಾಲಿನೊಂದಿಗೆ ಚೆನ್ನಾಗಿ ಹೊಂದಾಣಿಕೆಯಾಗುತ್ತದೆ. ಯಾಕೆಂದರೆ 'ನಾನು ಕುರ್‌ಆನಿನಲ್ಲಿ ವಿಶ್ವಾಸವಿಡುವುದಿಲ್ಲ' ಎಂದು ಹೇಳುವವನಿಗೆ ಈ ಸಿದ್ಧಾಂತವು ಚಡಪಡಿಕೆಯನ್ನು ಸೃಷ್ಟಿಸುತ್ತದೆ. ಕುರ್‌ಆನನ್ನು ತಿರಸ್ಕರಿಸುವ ವ್ಯಕ್ತಿಗೆ ಇತರರು ನೀಡುವ ಉತ್ತರಗಳು ಅಸಮರ್ಪಕವೆಂದು ಕಂಡುಬಂದಲ್ಲಿ ತಕ್ಷಣ ಅದಕ್ಕೊಂದು ವಿವರಣೆಯನ್ನು ಸ್ವತಃ ಕಂಡುಕೊಳ್ಳುವ ಅನಿವಾರ್ಯತೆಯಿರುತ್ತದೆ.

ವಾಸ್ತವವಾಗಿ, ಕುರ್‌ಆನಿನಲ್ಲಿ ಒಂದು ಸೂಕ್ತಿಯಿದೆ. ಇದನ್ನು ಇಂಗ್ಲಿಷಿಗೆ ಭಾಷಾಂತರ ಮಾಡುವಾಗ ಹೆಚ್ಚಿನವರೂ ಎಡವಿದ್ದಾರೆ. ತನಗೆ ಸತ್ಯವನ್ನು ವಿವರಿಸಿಕೊಡಲಾಗಿರುವುದನ್ನು ಆಲಿಸಿದ ಓರ್ವ ವ್ಯಕ್ತಿಯ ಬಗ್ಗೆ ಅಲ್ಲಾಹು ಈ ಸೂಕ್ತಿಯಲ್ಲಿ ಪ್ರಸ್ತಾಪಿಸುತ್ತಾನೆ. ಈ ಸೂಕ್ತಿ ಹೇಳುವಂತೆ ಆ ವ್ಯಕ್ತಿ ತನ್ನ ಕರ್ತವ್ಯದಲ್ಲಿ ಲೋಪವೆಸಗಿದವನಾಗಿದ್ದಾನೆ. ಯಾಕೆಂದರೆ ತಾನೊಂದು ಮಾಹಿತಿಯನ್ನು ಆಲಿಸಿದ ಬಳಿಕವೂ ಆತ ಅದರ ಸತ್ಯಾಸತ್ಯತೆಯನ್ನು ಪರೀಕ್ಷಿಸದೆ ಬಿಟ್ಟುಬಿಡುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ತಾನೊಂದು ಸಂಗತಿಯನ್ನು ಆಲಿಸಿದ ನಂತರ, ಅದರ ಬಗ್ಗೆ ಪರೀಕ್ಷೆ ಮಾಡದೆ

ಮತ್ತು ಅದು ಸತ್ಯವೇ ಎಂದು ಅನ್ವೇಷಿಸದೆ ಬಿಟ್ಟುಬಿಡುವವರು ತಪ್ಪಿತಸ್ಥರಾಗಿದ್ದಾರೆ. ಒಬ್ಬ ವ್ಯಕ್ತಿ ತಾನು ಆಲಿಸಿದ ಮಾಹಿತಿಗಳೆಲ್ಲವನ್ನೂ ಸಂಸ್ಕರಿಸಿ ಅದರಲ್ಲಿರುವ ರದ್ದಿಯನ್ನು ತಿಪ್ಪೆಗೆಸದು ಅಮೂಲ್ಯವಾಗಿರುವ ಮಾಹಿತಿಗಳನ್ನು, ಅದರಿಂದ ತಕ್ಷಣ ಲಾಭ ಪಡೆಯುವುದಕ್ಕಾಗಿ ಅಥವಾ ನಂತರದ ಕಾಲದಲ್ಲಿ ಲಾಭ ಪಡೆಯುವುದಕ್ಕಾಗಿ, ಉಳಿಸಿಡಬೇಕಾಗಿದೆ.

ಈ ಮಾಹಿತಿಗಳನ್ನು ತನ್ನ ತಲೆಯಲ್ಲಿ ಗಿರಕಿ ಹೊಡೆಯುವಂತೆ ಅವನು ಬಿಟ್ಟುಬಿಡಬಾರದು. ಅವನು ಅವುಗಳನ್ನು ಸೂಕ್ತ ಶ್ರೇಣಿಗಳಲ್ಲಿ ಜೋಡಿಸಿ ಆ ದೃಷ್ಟಿಯಿಂದಲೇ ಅವುಗಳನ್ನು ಸಮೀಪಿಸಬೇಕಾಗಿದೆ. ಉದಾಹರಣೆಗೆ: ಮಾಹಿತಿಯು ಅಸ್ಪಷ್ಟವಾಗಿದ್ದರೆ ಅದನ್ನು ಸತ್ಯಕ್ಕೆ ಹತ್ತಿರವಾಗಿದೆಯೋ ಅಥವಾ ಅಸತ್ಯಕ್ಕೆ ಹತ್ತಿರವಾಗಿದೆಯೋ ಎಂದು ಅವನು ವಿವೇಚಿಸಿ ತಿಳಿಯಬೇಕಾಗಿದೆ. ಆದರೆ ಎಲ್ಲ ವಾಸ್ತವಾಂಶಗಳನ್ನೂ ಹಾಜರುಪಡಿಸಿದಾಗ ಅವನು ಈ ಎರಡು ಆಯ್ಕೆಗಳಲ್ಲಿ ನಿಖರವಾದ ಒಂದನ್ನು ಆರಿಸಬೇಕಾಗಿದೆ. ಮಾಹಿತಿಯ ಸಾಚಾತನದ ಬಗ್ಗೆ ಅವನಿಗೆ ಇನ್ನೂ ಖಂಡಿತವಾದ ಅಭಿಪ್ರಾಯವಿರದಿದ್ದರೆ ಅವನು ಪುನಃ ಆ ಎಲ್ಲ ಮಾಹಿತಿಗಳನ್ನೂ ಸಂಸ್ಕರಿಸಿ ತನಗೆ ಈಗ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಈ ಕೊನೆಯ ಶ್ರಮ ವ್ಯರ್ಥವಾಗಿದ್ದರೂ, ವಾಸ್ತವವಾಗಿ, ನಂತರದ ಕಾಲದಲ್ಲಿ ಖಚಿತವಾದ ಸಮಾಪ್ತಿಯ ಕಡೆಗೆ ತಲುಪಲು ಅದು ಉಪಕರಿಸುತ್ತದೆ. ಯಾಕೆಂದರೆ ಅದು ಕನಿಷ್ಟ ಪಕ್ಷ ಆ ವ್ಯಕ್ತಿಗೆ ಮಾಹಿತಿಗಳನ್ನು ಗುರುತಿಸಲು, ಸಂಶೋಧನೆ ಮಾಡಲು ಮತ್ತು ಅವಲೋಕನ ಮಾಡಲು ನಿರ್ಬಂಧಿಸುತ್ತದೆ.

ಭವಿಷ್ಯದಲ್ಲಿ ಸಂಶೋಧನೆಗಳನ್ನು ಮಾಡಲಾದಾಗ ಮತ್ತು ಹೆಚ್ಚಿನ ಮಾಹಿತಿಗಳು ಲಭ್ಯವಾಗುವಾಗ ಮಾಹಿತಿಗಳೊಂದಿಗಿನ ಈ ಪಳಗುವಿಕೆಯು ಒಬ್ಬ ವ್ಯಕ್ತಿಗೆ 'ಹರಿತ'ವನ್ನು ನೀಡುತ್ತದೆ. ಅತಿಪ್ರಮುಖ ವಿಷಯವೇನೆಂದರೆ, ವಾಸ್ತವಾಂಶ ಗಳೊಂದಿಗೆ ವ್ಯವಹರಿಸುವ ವ್ಯಕ್ತಿ ಪರಾನುಭೂತಿ ಮತ್ತು ಅನಾಸಕ್ತಿಯಿಂದಾಗಿ ಅವುಗಳನ್ನು ಸುಮ್ಮನೆ ಉಪೇಕ್ಷಿಸಬಾರದು.

# ಪರ್ಯಾಯಗಳನ್ನು ಇಲ್ಲದಾಗಿಸುವುದು

ಕುರ್‌ಆನಿನ ಸತ್ಯಸಂಧತೆಯ ಬಗ್ಗೆಯಿರುವ ನೈಜ ಖಾತ್ರಿಯು ಆದಿಯಿಂದ ಅಂತ್ಯದವರೆಗೆ ನೆಲೆನಿಂತಿರುವ ಅದರ ಆತ್ಮವಿಶ್ವಾಸದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಆತ್ಮವಿಶ್ವಾಸವು ಬೇರೆಯೇ ಸಮೀಪನೆಯಿಂದ ಅಂದರೆ, *'ಪರ್ಯಾಯಗಳನ್ನು ಇಲ್ಲದಾಗಿಸುವುದರಿಂದ'* ಬರುತ್ತದೆ. ಮುಖ್ಯವಾಗಿ, ಕುರ್‌ಆನ್ ಘೋಷಿಸುತ್ತದೆ: "ಈ ಗ್ರಂಥವು ಒಂದು ದೈವಿಕ ಸಂದೇಶವಾಗಿದೆ. ನೀವು ಇದನ್ನು ನಂಬುವುದಿಲ್ಲವಾದರೆ, ಅದು ಏನು?" ಬೇರೆ ಮಾತುಗಳಲ್ಲಿ ಹೇಳುವುದಾದರೆ, ಈ ಗ್ರಂಥ ಏನು ಎಂಬುದರ ಬಗ್ಗೆ ಬೇರೊಂದು ವಿವರಣೆಯೊಂದಿಗೆ ಬರುವಂತೆ ಅದು ಓದುಗರಿಗೆ ಸವಾಲು ಹಾಕುತ್ತದೆ. "ಕಾಗದ ಮತ್ತು ಮಸಿಯಿಂದ ರಚಿಸಲಾದ ಒಂದು ಗ್ರಂಥ ಇಲ್ಲಿದೆ. ಇದು ಎಲ್ಲಿಂದ ಬಂತು? ಅದೊಂದು ದೈವಿಕ ಗ್ರಂಥವೆಂದು ಅದು ಹೇಳುತ್ತದೆ. ಅಲ್ಲವೆಂದಾದರೆ, ಅದರ ಮೂಲ ಏನು?" ಸ್ವಾರಸ್ಯಕರವಾದ ವಿಚಾರ ವೇನೆಂದರೆ, ಸಮರ್ಪಕವಾದ ಒಂದು ವಿವರಣೆಯೊಂದಿಗೆ ಮುಂದೆ ಬರಲು ಇದುವರೆಗೂ ಯಾರಿಗೂ ಸಾಧ್ಯವಾಗಿಲ್ಲ. ವಾಸ್ತವಿಕವಾಗಿ (ಇದು ದೈವಿಕ ಗ್ರಂಥ ಎಂಬುದರ ಹೊರತಾದ) ಎಲ್ಲ ಪರ್ಯಾಯ ವಿವರಣೆಗಳನ್ನೂ ಅದು ಇಲ್ಲದಾಗಿಸಿದೆ. ಮುಸ್ಲಿಮೇತರರಿಂದ ಸ್ಪಷ್ಟವಾಗಿ ಸ್ಥಾಪಿಸಲಾದಂತೆ ಈ ಪರ್ಯಾಯ ವಿವರಣೆಗಳನ್ನು ಪರಸ್ಪರ ಒಂದನ್ನೊಂದು ಅವಲಂಬಿಸಿ ಕೊಂಡಿರುವ ಎರಡು ಮೂಲಭೂತ ತತ್ವಗಳಾಗಿ ವಿಂಗಡಿಸಬಹುದು.

ಒಂದು ಬದಿಯಲ್ಲಿ, ನೂರಾರು ವರ್ಷಗಳ ಕಾಲ ಕುರ್‌ಆನನ್ನು ಅಧ್ಯಯನ ಮಾಡಿದ ಒಂದು ಗುಂಪು ಜನರಿದ್ದಾರೆ. ಇವರು ಹೇಳುವುದೇನೆಂದರೆ: "ಒಂದು ವಿಷಯವಂತೂ ಸ್ಪಷ್ಟ. ಆ ವ್ಯಕ್ತಿ, ಮುಹಮ್ಮದ್, ತಾನೊಬ್ಬ ಪ್ರವಾದಿಯೆಂದು

ಭಾವಿಸಿದ್ದರು. ವಾಸ್ತವದಲ್ಲಿ ಅವರೊಬ್ಬ ಹುಚ್ಚರಾಗಿದ್ದರು." ಮುಹಮ್ಮದ್ (ﷺ)ರನ್ನು ಹೇಗೋ ಮೋಸಗೊಳಿಸಲಾಗಿದೆ ಎನ್ನುವುದನ್ನು ಅವರು ಅರ್ಥಮಾಡಿ ಕೊಂಡಿದ್ದಾರೆ. ಇನ್ನೊಂದು ಬದಿಯಲ್ಲಿ, ಇನ್ನೊಂದು ಗುಂಪು ಜನರಿದ್ದಾರೆ. ಇವರು ಹೇಳುವುದೇನೆಂದರೆ: "ಈ ಪುರಾವೆಯ ಆಧಾರದಲ್ಲಿ ಒಂದು ವಿಷಯವಂತೂ ಸ್ಪಷ್ಟ. ಅದೇನೆಂದರೆ ಮುಹಮ್ಮದ್ ಒಬ್ಬ ಸುಳ್ಳುಗಾರನಾಗಿದ್ದಾರೆ." ವ್ಯಂಗ್ಯವಾಗಿ ಹೇಳುವುದಾದರೆ, ಈ ಎರಡು ಗುಂಪು ಜನರು ಪರಸ್ಪರ ವಿರೋಧಾಭಾಸ ಸೂಚಿಸದೆ ಎಂದೂ ಒಟ್ಟುಗೂಡಲಾರರು.

ವಾಸ್ತವವಾಗಿ, ಇಸ್ಲಾಮಿನೆಡೆಗೆ ಬೊಟ್ಟು ಮಾಡುವ ಅನೇಕ ಉಲ್ಲೇಖಗಳು ಈ ಎರಡು ತತ್ವಗಳನ್ನು ಎತ್ತಿ ಹಿಡಿಯುತ್ತವೆ. ಮುಹಮ್ಮದ್(ﷺ)ರವರು ಒಬ್ಬ ಹುಚ್ಚನಾಗಿದ್ದರು ಎಂಬಲ್ಲಿಂದ ಮಾತನ್ನು ಆರಂಭಿಸಿ ಮುಹಮ್ಮದ್(ﷺ)ರವರು ಒಬ್ಬ ಸುಳ್ಳುಗಾರನಾಗಿದ್ದರು ಎಂಬ ಮಾತಿನಿಂದ ಜನರು ಸಂಭಾಷಣೆಯನ್ನು ಕೊನೆಗೊಳಿಸುತ್ತಾರೆ. ಮುಹಮ್ಮದ್(ﷺ)ರವರು ಎರಡೂ ಆಗಿದ್ದಿರಬಹುದು ಎಂಬುದನ್ನು ಅವರು ಅರ್ಥಮಾಡಿಕೊಳ್ಳುವುದೇ ಇಲ್ಲ! ಉದಾಹರಣೆಗೆ, ಬುದ್ಧಿಭ್ರಮಣೆಗೊಂಡ ಒಬ್ಬ ವ್ಯಕ್ತಿ ತನ್ನನ್ನು ತಾನೇ ಪ್ರವಾದಿಯೆಂದು ಬಗೆಯುತ್ತಾನೆ ಎಂದಾದರೆ ಅವನು ರಾತ್ರಿ ಪೂರ್ತಿ ನಿದ್ದೆಗೆಟ್ಟು 'ನಾನು ಪ್ರವಾದಿಯೆಂದು ಜನರು ನಂಬುವುದಕ್ಕೋಸ್ಕರ ನಾಳೆ ನಾನು ಏನು ಮಾಡಬೇಕು' ಎಂದು ಉಪಾಯ ರೂಪಿಸುವುದಿಲ್ಲ. ಅವನು ತನ್ನನ್ನು ಪ್ರವಾದಿಯೆಂದೇ ದೃಢವಾಗಿ ನಂಬುತ್ತಾನೆ ಮತ್ತು ತನಗೆ ದೈವಿಕ ಸಂದೇಶಗಳ ಮೂಲಕ ಉತ್ತರ ನೀಡಲಾಗುವುದು ಎಂದು ಅವನು ಬಲವಾದ ಭರವಸೆ ಹೊಂದಿರುತ್ತಾನೆ.

# ವಿಮರ್ಶಕನ ಗೋಳು!

ವಾಸ್ತವ ಸಂಗತಿಯೇನೆಂದರೆ, ಕುರ್‌ಆನಿನಲ್ಲಿರುವ ಅನೇಕ ವಚನಗಳು ಪ್ರಶ್ನೆಗಳಿಗೆ ಉತ್ತರವಾಗಿ ಅವತೀರ್ಣಗೊಂಡದ್ದಾಗಿವೆ. ಜನರ ಪೈಕಿ ಕೆಲವರು ಮುಹಮ್ಮದ್(ﷺ)ರೊಂದಿಗೆ ಒಂದು ಪ್ರಶ್ನೆಯನ್ನು ಕೇಳುವರು. ಆಗ ಅದಕ್ಕೆ ಉತ್ತರವಾಗಿ ಕುರ್‌ಆನ್ ವಚನಗಳು ಅವತೀರ್ಣಗೊಳ್ಳುತ್ತಿದ್ದವು. ಒಬ್ಬ ವ್ಯಕ್ತಿ ಹುಚ್ಚನಾಗಿದ್ದರೆ ಮತ್ತು ದೇವದೂತನೊಬ್ಬನು ತನ್ನ ಕಿವಿಯಲ್ಲಿ ವಚನಗಳನ್ನು ಹಾಕುತ್ತಿದ್ದಾನೆಂದು ಅವನು ಭಾವಿಸಿಕೊಂಡಿದ್ದರೆ, ಯಾರಾದರೊಬ್ಬ ವ್ಯಕ್ತಿ ತನ್ನೊಂದಿಗೆ ಏನಾದರೂ ಪ್ರಶ್ನೆ ಕೇಳುವಾಗ ಖಂಡಿತವಾಗಿಯೂ ದೇವದೂತನು ಬಂದು ತನಗೆ ಉತ್ತರ ಕೊಡುತ್ತಾನೆ ಎಂದೇ ನಂಬುತ್ತಾನೆ. ಅವನು ಹುಚ್ಚನಾಗಿರುವುದರಿಂದ ಹಾಗೆಯೇ ನಂಬುತ್ತಾನೆ. ಪ್ರಶ್ನೆ ಕೇಳಿದ ವ್ಯಕ್ತಿಯೊಂದಿಗೆ, 'ಸ್ವಲ್ಪ ತಾಳು! ನಾನೀಗ ಬರುತ್ತೇನೆ' ಎಂದು ಹೇಳಿ ತನ್ನ ಗೆಳೆಯರ ಬಳಿ ಹೋಗಿ 'ನಿಮ್ಮಲ್ಲಿ ಯಾರಿಗಾದರೂ ಇದರ ಉತ್ತರ ಗೊತ್ತೇ?' ಎಂದು ಕೇಳಲು ಹೊರಡಲಾರನು. ಇಂತಹ ಸ್ವಭಾವವು ತನ್ನನ್ನು ತಾನೇ ಪ್ರವಾದಿಯೆಂದು ನಂಬದ ಒಬ್ಬ ವ್ಯಕ್ತಿಯ ಲಕ್ಷಣವಾಗಿದೆ. ಇದು ಎರಡು ರೀತಿಯಲ್ಲೂ ಸಂಭವಿಸುವುದನ್ನು ಸ್ವೀಕರಿಸಲು ಮುಸ್ಲಿಮೇತರರು ಹಿಂಜರಿಯುತ್ತಾರೆ. ಒಬ್ಬ ವ್ಯಕ್ತಿ ಹುಚ್ಚನಾಗಿರಬಹುದು ಅಥವಾ ಸುಳ್ಳುಗಾರನಾಗಿರಬಹುದು. ಆತ ಇವೆರಡರ ಪೈಕಿ ಒಂದು ಮಾತ್ರವಾಗಿರುತ್ತಾನೆ ಅಥವಾ ಎರಡೂ ಆಗಿರುವುದಿಲ್ಲ. ಆದರೆ ಖಂಡಿತವಾಗಿಯೂ ಆತ ಎರಡೂ ಆಗಿರಲು ಸಾಧ್ಯವಿಲ್ಲ. ಇವೆರಡು ಪ್ರಶ್ನಾತೀತವಾಗಿ ಪರಸ್ಪರ ವ್ಯತಿರಿಕ್ತವಾದ ಎರಡು ವ್ಯಕ್ತಿತ್ವಗಳಾಗಿವೆ ಎನ್ನುವುದನ್ನು ಇಲ್ಲಿ ಒತ್ತುಕೊಟ್ಟು ಹೇಳಬೇಕಾಗಿದೆ.

ಮುಸ್ಲಿಮೇತರರು ಪದೇ ಪದೇ ಗಿರಕಿ ಹೊಡೆಯುತ್ತಿರುವ ಚಕ್ರವು ಇದಕ್ಕೊಂದು ಸ್ಪಷ್ಟ ಉದಾಹರಣೆಯಾಗಿದೆ. 'ಕುರ್‌ಆನಿನ ಮೂಲ ಯಾವುದು?' ಎಂದು

ಮುಸ್ಲಿಮೇತರರ ಪೈಕಿ ಒಬ್ಬರೊಂದಿಗೆ ಕೇಳಿದರೆ 'ಅದು ಹುಚ್ಚನಾಗಿದ್ದ ಒಬ್ಬ ವ್ಯಕ್ತಿಯ ಮೆದುಳಿನಿಂದ ಉದ್ಭವಿಸಿದ ವಚನಗಳಾಗಿವೆ' ಎನ್ನುತ್ತಾರೆ. ತಕ್ಷಣ ನೀವು ಅವರೊಂದಿಗೆ ಕೇಳುತ್ತೀರಿ: 'ಅದು ಹುಚ್ಚನೊಬ್ಬನ ಮೆದುಳಿನಿಂದ ಉದ್ಭವಿಸಿದ್ದಾಗಿದ್ದರೆ ಅದರಲ್ಲಿರುವ ಮಾಹಿತಿಗಳು ಅವರಿಗೆ ಲಭ್ಯವಾಗಿದ್ದು ಎಲ್ಲಿಂದ? ಅರಬರಿಗೆ ಪರಿಚಯವಿಲ್ಲದ ಅನೇಕ ವಿಷಯಗಳನ್ನು ಕುರ್‌ಆನ್ ಹೊಂದಿದೆಯಲ್ಲವೇ?' ನೀವು ಅವರೊಂದಿಗೆ ಕೇಳಿದ ಆ ವಾಸ್ತವಾಂಶವನ್ನು ವಿವರಿಸುವುದಕ್ಕೋಸ್ಕರ ಅವರು ತಮ್ಮ ಧಾಟಿಯನ್ನು ಬದಲಿಸಿ ಹೀಗೆನ್ನುತ್ತಾರೆ: 'ಸರಿ! ಹಾಗಾದರೆ ಅವರು ಹುಚ್ಚನಲ್ಲ, ಯಾವುದೋ ವಿದೇಶೀಯರು ಅವರಿಗೆ ಆ ಮಾಹಿತಿಗಳನ್ನು ಒದಗಿಸಿರಬಹುದು. ಅದನ್ನು ಹಿಡಿದು ತಾನು ಪ್ರವಾದಿಯೆಂದು ಅವರು ಜನರೊಂದಿಗೆ ಸುಳ್ಳು ಹೇಳಿದ್ದಾರೆ.' ಈ ಸಂದರ್ಭದಲ್ಲಿ ನೀವು ಪುನಃ ಅವರೊಂದಿಗೆ ಕೇಳುತ್ತೀರಿ: 'ಮುಹಮ್ಮದ್ ಓರ್ವ ಸುಳ್ಳುಗಾರರಾಗಿದ್ದರೆ ಅವರಿಗೆ ಆ ಆತ್ಮವಿಶ್ವಾಸ ಲಭ್ಯವಾಗಿದ್ದು ಎಲ್ಲಿಂದ? ಅವರು ತನ್ನನ್ನು ತಾನೇ ಪ್ರವಾದಿಯೆಂದು ಅಷ್ಟು ದೃಢವಾಗಿ ಹೇಗೆ ನಂಬಿದರು?' ಆಗ ಅವರು ಮೂಲೆಯಿಂದ ಚಂಗನೆ ನೆಗೆಯುವ ಬೆಕ್ಕಿನಂತೆ ತಮ್ಮ ಮನದಲ್ಲಿ ಮೊದಲು ಮೂಡಿದ ಅದೇ ಉತ್ತರವನ್ನು ಹೇಳುತ್ತಾರೆ. ಆ ಸಾಧ್ಯತೆಯನ್ನು ತಾನು ಈಗಾಗಲೇ ಇಲ್ಲದಾಗಿಸಿರುವೆನೆಂಬುದನ್ನು ಮರೆತು 'ಸರಿ! ಹಾಗಾದರೆ ಅವರು ಸುಳ್ಳುಗಾರನಲ್ಲ, ಅವರು ನಿಜವಾಗಿಯೂ ತನ್ನನ್ನು ತಾನೇ ಪ್ರವಾದಿಯೆಂದು ಬಗೆದುಕೊಂಡ ಒಬ್ಬ ಹುಚ್ಚನಾಗಿರಬಹುದು' ಎನ್ನುತ್ತಾರೆ. ಹೀಗೆ ಅವರು ಅದೇ ನಿರರ್ಥಕ ಚಕ್ರದಲ್ಲಿ ಪುನಃ ಪುನಃ ಸುತ್ತತೊಡಗುತ್ತಾರೆ.

ಈಗಾಗಲೇ ಹೇಳಿದಂತೆ, ಕುರ್‌ಆನಿನಲ್ಲಿ ಅನೇಕ ಮಾಹಿತಿಗಳಿವೆ. ಅವುಗಳ ಮೂಲವನ್ನು ಅಲ್ಲಾಹನ ಹೊರತು ಇತರ ಯಾರ ಮೇಲೂ ಹೊರಿಸಲು ಸಾಧ್ಯವಿಲ್ಲ. ಉದಾಹರಣೆಗೆ: ನೂರಾರು ಮೈಲಿ ಉತ್ತರದಲ್ಲಿರುವ *ದುಲ್‌ಕರ್ನೈನ್‌ನ* ಗೋಡೆಯ ಬಗ್ಗೆ ಮುಹಮ್ಮದ್(ﷺ)ರಿಗೆ ಮಾಹಿತಿ ಒದಗಿಸಿದ್ದು ಯಾರು? ಭ್ರೂಣಶಾಸ್ತ್ರದ ಬಗ್ಗೆ ಅವರಿಗೆ ಮಾಹಿತಿ ನೀಡಿದ್ದು ಯಾರು? ಜನರು ಈ ನಿಜಸ್ಥಿತಿಯನ್ನು ಕಾಣುವಾಗ ಮತ್ತು ಇದರ

ಮೂಲವನ್ನು ದೈವಿಕವೆಂದು ಹೇಳಲು ಅವರು ಹಿಂಜರಿಯುವಾಗ, ಮುಹಮ್ಮದ್(ﷺ)ರಿಗೆ ಯಾರೋ ಈ ಮಾಹಿತಿಗಳನ್ನು ಒದಗಿಸುತ್ತಿದ್ದರು ಮತ್ತು ಅವರು ಅದನ್ನು ಹಿಡಿದು ತನ್ನನ್ನು ಪ್ರವಾದಿಯೆಂದು ಹೇಳಿ ಜನರನ್ನು ಮರಳು ಮಾಡುತ್ತಿದ್ದರು ಎಂಬ ಸಮಾಪ್ತಿಗೆ ತಲುಪುತ್ತಾರೆ.

ಆದರೆ ಈ ತತ್ವವನ್ನು ಒಂದು ಚಿಕ್ಕ ಪ್ರಶ್ನೆಯಿಂದ ಸುಲಭವಾಗಿ ಖಂಡಿಸಬಹುದು. 'ಮುಹಮ್ಮದ್(ﷺ)ರವರು ಸುಳ್ಳುಗಾರರಾಗಿದ್ದರೆ ಅವರಿಗೆ ಆತ್ಮವಿಶ್ವಾಸ ಲಭ್ಯವಾಗಿದ್ದು ಎಲ್ಲಿಂದ? ಇತರರು ಹೇಳಲು ಸಾಧ್ಯವಾಗದ್ದನ್ನು ಜನರ ಮುಖ ನೋಡಿ ನೇರವಾಗಿ ಹೇಳಲು ಅವರಿಗೆ ಹೇಗೆ ಸಾಧ್ಯವಾಯಿತು?' ತನ್ನ ಬಳಿ ನೈಜ ದೈವಿಕ ಸಂದೇಶವಿದೆ ಎಂದು ದೃಢವಾಗಿ ನಂಬಿರುವ ಒಬ್ಬನ ಹೊರತು ಯಾರಿಗೂ ಇಂತಹ ಒಂದು ಆತ್ಮವಿಶ್ವಾಸ ಇರಲು ಸಾಧ್ಯವಿಲ್ಲ.

## ಅಬೂ ಲಹಬ್

ಪ್ರವಾದಿ ಮುಹಮ್ಮದ್(ﷺ)ರಿಗೆ ಅಬೂ ಲಹಬ್ ಎಂಬ ಹೆಸರಿನ ಒಬ್ಬ ಚಿಕ್ಕಪ್ಪ ಇದ್ದರು. ಈ ವ್ಯಕ್ತಿ ಇಸ್ಲಾಮನ್ನು ಎಷ್ಟು ತೀಕ್ಷ್ಣವಾಗಿ ವಿರೋಧಿಸುತ್ತಿದ್ದರೆಂದರೆ ಪ್ರವಾದಿ ಮುಹಮ್ಮದ್(ﷺ)ರವರನ್ನು ಅವಹೇಳನ ಮಾಡುವ ಸಲುವಾಗಿಯೇ ಅವರನ್ನು ಹಿಂಬಾಲಿಸುತ್ತಿದ್ದರು. ಪ್ರವಾದಿ ಮುಹಮ್ಮದ್(ﷺ)ರವರು ಯಾರಾದರೂ ಅಪರಿಚಿತ ವ್ಯಕ್ತಿಯೊಂದಿಗೆ ಮಾತನಾಡುವುದಾಗಿ ಕಂಡರೆ ಅವರಿಬ್ಬರು ಬೇರ್ಪಡುವವರೆಗೆ ಅವರು ಕಾಯುತ್ತಿದ್ದರು. ತರುವಾಯ ಆ ಅಪರಿಚಿತನ ಬಳಿ ಹೋಗಿ 'ಆತ ನಿನ್ನೊಂದಿಗೆ ಏನು ಹೇಳಿದ? ಆತ 'ಕಪ್ಪು' ಎಂದು ಹೇಳಿದನೇ? ಸರಿ, ಹಾಗಾದರೆ ಅದು 'ಬಿಳಿ'ಯಾಗಿದೆ. ಆತ 'ಹಗಲು'

ಎಂದು ಹೇಳಿದನೇ? ಸರಿ, ಹಾಗಾದರೆ ಅದು 'ರಾತ್ರಿ'ಯಾಗಿದೆ' ಎನ್ನುತ್ತಿದ್ದರು. ಪ್ರವಾದಿ ಮುಹಮ್ಮದ್(ﷺ)ರವರು ಮತ್ತು ಮುಸ್ಲಿಮರು ಏನು ಹೇಳುತ್ತಿದ್ದರೋ ಅದಕ್ಕೆ ನೇರ ತದ್ವಿರುದ್ಧವಾದುದನ್ನೇ ಇವರು ಪೂರ್ಣ ನಿಷ್ಠೆಯೊಂದಿಗೆ ಹೇಳುತ್ತಿದ್ದರು. ಹೀಗಿರುವಾಗ, ಅಬೂ ಲಹಬ್ ಕೊನೆಯುಸಿರೆಳೆಯುವ ಸರಿಸುಮಾರು ಹತ್ತು ವರ್ಷಗಳ ಮುಂಚೆ ಅವರ ಬಗ್ಗೆ ಒಂದು ಚಿಕ್ಕ ಅಧ್ಯಾಯ ಅವತೀರ್ಣಗೊಂಡಿತು (ಕುರ್‌ಆನ್ ಅಧ್ಯಾಯ 111). ಅಬೂ ಲಹಬ್ ನರಕಕ್ಕೆ ಹೋಗುವವನೆಂದು ಈ ಅಧ್ಯಾಯವು ಸ್ಪಷ್ಟವಾಗಿ ಹೇಳಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವನೆಂದೂ ಮುಸ್ಲಿಮನಾಗಲಾರನು, ಆದ್ದರಿಂದ ಅವನು ಎಂದೆಂದಿಗೂ ಶಪಿಸಲ್ಪಡುವನು ಎಂದು ಹೇಳಿತು.

'ನಾನೆಂದೂ ಬದಲಾಗಲಾರೆನು, ಅಂದರೆ ನಾನೆಂದೂ ಮುಸ್ಲಿಮನಾಗಲಾರೆನು ಮತ್ತು ನಾನು ನರಕಕ್ಕೆ ಹೋಗುವೆನು ಎಂದು ಮುಹಮ್ಮದ್‌ಗೆ ಕುರ್‌ಆನ್ ಅವತೀರ್ಣಗೊಂಡಿದೆಯೆಂದು ನಾನು ಕೇಳಿಸಿಕೊಂಡೆ. ಸರಿ! ಹಾಗಾದರೆ ಇಗೋ ನಾನು ಮುಸ್ಲಿಮನಾಗಿದ್ದೇನೆ! ಈಗ ನಿಮ್ಮ ಅಭಿಪ್ರಾಯವೇನು? ನೀವು ದೈವಿಕವೆಂದು ನಂಬುವ ಕುರ್‌ಆನಿನ ಬಗ್ಗೆ ನಿಮ್ಮ ನಿಲುವೇನು?' ಎಂದು ಹೇಳುವ ಅವಕಾಶ ಅಬೂ ಲಹಬರಿಗೆ ಹತ್ತು ವರ್ಷಗಳವರೆಗೂ ಇತ್ತು. ಆದರೆ ಅವರು ಹಾಗೆ ಹೇಳಲೇ ಇಲ್ಲ. ವಾಸ್ತವದಲ್ಲಿ, ಎಲ್ಲ ಸಂದರ್ಭಗಳಲ್ಲೂ ಇಸ್ಲಾಮ್ ಹೇಳುವುದಕ್ಕೆ ನೇರ ತದ್ವಿರುದ್ಧವಾಗಿರುವುದನ್ನು ಹೇಳುತ್ತಿದ್ದ ಅವರಿಂದ ಇಂತಹ ಒಂದು ಸ್ವಭಾವವನ್ನು ನಿರೀಕ್ಷಿಸಬೇಕಾಗಿತ್ತು!

'ಓ ಅಬೂ ಲಹಬ್! ನೀವು ನನ್ನನ್ನು ದ್ವೇಷಿಸುತ್ತಿರುವಿರಿ ಮತ್ತು ನನ್ನ ಕಥೆ ಮುಗಿಯುವುದನ್ನು ಕಾಯುತ್ತಿರುವಿರಿ. ಇಲ್ಲಿ ಬನ್ನಿ, ಈ ಮಾತುಗಳನ್ನು ಹೇಳಿರಿ! ತಕ್ಷಣ ನನ್ನ ಕಥೆ ಮುಗಿಯುತ್ತದೆ. ಬನ್ನಿ, ಈ ಮಾತುಗಳನ್ನು ಹೇಳಿರಿ' ಎಂದು ಪ್ರವಾದಿ ಮುಹಮ್ಮದ್(ﷺ)ರವರು ಅವರೊಂದಿಗೆ ಹೇಳುವಂತಹ ಸಾರಾಂಶ ವನ್ನು ಈ ಅಧ್ಯಾಯವು ಹೊಂದಿದೆ. ಆದರೆ ಆ ಮಾತುಗಳನ್ನು ಅಬೂ ಲಹಬ್ ಹೇಳಲೇ ಇಲ್ಲ! ಹತ್ತು ವರ್ಷಗಳ ಕಾಲ! ಈ ಕಾಲದಾದ್ಯಂತ ಅವರು

ಇಸ್ಲಾಮ್ ಸ್ವೀಕರಿಸುವುದಾಗಲಿ ಮುಸ್ಲಿಮರೊಂದಿಗೆ ಮೃದು ನಿಲುವು ಹೊಂದುವುದಾಗಲಿ ಮಾಡಲೇ ಇಲ್ಲ!

ಮುಹಮ್ಮದ್(ﷺ)ರವರು ಅಲ್ಲಾಹನ ನಿಜವಾದ ಸಂದೇಶವಾಹಕರಲ್ಲದಿದ್ದಲ್ಲಿ ಕುರ್‌ಆನಿನ ಈ ಭವಿಷ್ಯವಾಣಿಯನ್ನು ಅಬೂ ಲಹಬ್ ನಿಜಪಡಿಸುವರೆಂಬ ದೃಢ ವಿಶ್ವಾಸವನ್ನು ಹೊಂದಲು ಅವರಿಗೆ ಹೇಗೆ ಸಾಧ್ಯವಾಯಿತು? ತನ್ನ ಪ್ರವಾದಿತ್ವವನ್ನು ಅನರ್ಹಗೊಳಿಸಲು ಒಬ್ಬ ವ್ಯಕ್ತಿಗೆ ಹತ್ತು ವರ್ಷಗಳ ಕಾಲಾವಕಾಶ ನೀಡುವ ಆತ್ಮವಿಶ್ವಾಸ ಅವರಿಗೆ ಎಲ್ಲಿಂದ ಲಭ್ಯವಾಯಿತು? ಇದಕ್ಕಿರುವ ಒಂದೇ ಒಂದು ಉತ್ತರವೇನೆಂದರೆ ಅವರು ಅಲ್ಲಾಹನ ಸಂದೇಶ ವಾಹಕರಾಗಿದ್ದರು. ಇಂತಹ ಒಂದು ಅಪಾಯಕಾರಿ ಸವಾಲನ್ನು ಮುಂದಿಡ ಬೇಕಾದರೆ ತನಗೆ ಅವತೀರ್ಣವಾಗುತ್ತಿರುವುದು ದೈವಿಕ ವಾಣಿಗಳಾಗಿವೆ ಎಂಬ ಬಗ್ಗೆ ಅವರಿಗೆ ಪೂರ್ಣವಾಗಿ ಮನದಟ್ಟಾಗಿರಬೇಕಾದುದು ಅತ್ಯಾವಶ್ಯಕವಾಗಿದೆ.

## ವಲಸೆ

ತನ್ನ ಪ್ರವಾದಿತ್ವದ ಮೇಲೆ ಮತ್ತು ತತ್ಪರಿಣಾಮವಾಗಿ ತನ್ನ ಹಾಗೂ ತನ್ನ ಸಂದೇಶದ ಮೇಲೆ ದೈವಿಕ ಸಂರಕ್ಷಣೆಯಿದೆ ಎಂಬ ಆತ್ಮವಿಶ್ವಾಸ ಪ್ರವಾದಿ ಮುಹಮ್ಮದ್(ﷺ)ರಿಗೆ ಇತ್ತು ಎನ್ನುವುದಕ್ಕಿರುವ ಇನ್ನೊಂದು ಉದಾಹರಣೆ ಅವರು ಅಬೂಬಕ್ರ್(رضي الله عنه) ಎಂಬವರೊಂದಿಗೆ ಮಕ್ಕಾದಿಂದ ಮದೀನಕ್ಕೆ **ವಲಸೆ** ಹೋದಾಗ ಗುಹೆಯೊಂದರಲ್ಲಿ ಅವಿತಿದ್ದ ಸಂದರ್ಭವಾಗಿದೆ. ಶತ್ರುಗಳು ತಮ್ಮನ್ನು ಕೊಲ್ಲಲು ಬರುವುದನ್ನು ಅವರಿಬ್ಬರೂ ಸ್ಪಷ್ಟವಾಗಿ ಕಂಡಿದ್ದರು. ಅಬೂಬಕ್ರ್ (رضي الله عنه)ರಂತೂ ಭಯಭೀತರಾಗಿದ್ದರು. ಒಂದು ವೇಳೆ ಮುಹಮ್ಮದ್(ﷺ)ರವರು

ಸುಳ್ಳುಗಾರರಾಗಿದ್ದರೆ, ಸುಳ್ಳು ಸೃಷ್ಟಿಸುವವರಾಗಿದ್ದರೆ ಮತ್ತು ಜನರು ತನ್ನನ್ನು ಪ್ರವಾದಿಯೆಂದು ನಂಬುವ ಮೂಲಕ ಜನರನ್ನು ಮೋಸಗೊಳಿಸಲು ಯತ್ನಿಸುವವರಾಗಿದ್ದರೆ, ಖಂಡಿತವಾಗಿಯೂ ಅವರು ತಮ್ಮ ಮಿತ್ರನೊಂದಿಗೆ 'ಓ ಅಬೂಬಕ್ರ್! ಈ ಗುಹೆಯ ಹಿಂಬದಿಯಿಂದ ಹೊರಹೋಗುವ ಯಾವುದಾದರೂ ದಾರಿಯಿದೆಯೋ ಎಂದು ನೋಡು!' ಅಥವಾ 'ಆ ಮೂಲೆಯಲ್ಲಿ ಮುದುರಿಕೊಂಡು ಬಿದ್ದಿರು ಮತ್ತು ಮೌನವಾಗಿರು!' ಎಂದಷ್ಟೇ ಹೇಳುವರೆಂದು ಯಾರಾದರೂ ನಿರೀಕ್ಷಿಸುವರು. ಆದರೆ ವಾಸ್ತವವಾಗಿ, ಅವರು ಅಬೂಬಕ್ರ್(ﷺ)ರೊಂದಿಗೆ ಏನು ಹೇಳಿದರೋ ಅದು ಅವರ ಆತ್ಮವಿಶ್ವಾಸವನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ. ಅವರು ಹೇಳಿದರು: 'ನಿರಾಳವಾಗಿರು! ಅಲ್ಲಾಹು ನಮ್ಮೊಂದಿಗಿದ್ದಾನೆ ಮತ್ತು ಖಂಡಿತವಾಗಿಯೂ ಅಲ್ಲಾಹು ನಮ್ಮನ್ನು ಕಾಪಾಡುತ್ತಾನೆ.' ಈಗ, ಅವರು ಜನರನ್ನು ಮೋಸಗೊಳಿಸುತ್ತಿದ್ದಾರೆ ಎಂದು ಯಾರಾದರೂ ಭಾವಿಸುವುದಾದರೆ ಅವರಿಗೆ ಈ ಆತ್ಮವಿಶ್ವಾಸ ಲಭ್ಯವಾಗಿದ್ದು ಎಲ್ಲಿಂದ? ವಾಸ್ತವವಾಗಿ, ಸುಳ್ಳು ಹೇಳುವವನ ಅಥವಾ ಸುಳ್ಳು ಹೆಣೆಯುವವನ ಮನಸ್ಥಿತಿಯು ಹೀಗಿರುವುದಿಲ್ಲ.

ಆದ್ದರಿಂದ, ಈಗಾಗಲೇ ವಿವರಿಸಲಾದಂತೆ, ಮುಸ್ಲಿಮೇತರರು ನಿರ್ಗಮನ ದಾರಿಯೊಂದನ್ನು ಹುಡುಕುತ್ತಾ, ಕುರ್‌ಆನ್‌ನಲ್ಲಿರುವ ಸಂಶೋಧನೆಗಳನ್ನು ಅವುಗಳ ಸೂಕ್ತ ಮೂಲಕ್ಕೆ ಸೇರಿಸದೆ ಅವುಗಳನ್ನು ವಿವರಿಸಲು ಯಾವುದಾದರೂ ದಾರಿಯನ್ನು ಅರಸುತ್ತಾ ಚಕ್ರಾಕಾರದಲ್ಲಿ ಪುನಃ ಪುನಃ ಚಲಿಸುವುದನ್ನು ನಾವು ಕಾಣುತ್ತೇವೆ. ಒಂದು ಕಡೆ, ಸೋಮವಾರ, ಬುಧವಾರ ಮತ್ತು ಶುಕ್ರವಾರಗಳಲ್ಲಿ ಅವರು ನಿಮ್ಮೊಂದಿಗೆ 'ಅವರೊಬ್ಬ ಸುಳ್ಳುಗಾರ ನಾಗಿದ್ದರು' ಎನ್ನುತ್ತಾರೆ. ಇನ್ನೊಂದು ಕಡೆ, ಮಂಗಳವಾರ, ಗುರುವಾರ ಮತ್ತು ಶನಿವಾರಗಳಲ್ಲಿ 'ಅವರೊಬ್ಬ ಹುಚ್ಚನಾಗಿದ್ದರು' ಎನ್ನುತ್ತಾರೆ. ಆದರೆ ಒಬ್ಬ ವ್ಯಕ್ತಿ ಎರಡೂ ಆಗಿದ್ದರು ಎನ್ನುವುದನ್ನು ಒಪ್ಪಿಕೊಳ್ಳಲು ಅವರು ನಿರಾಕರಿಸುತ್ತಾರೆ. ಆದರೂ ಅವರಿಗೆ ಎರಡೂ ಸಿದ್ಧಾಂತಗಳು ಬೇಕಾಗಿದೆ. ಕುರ್‌ಆನ್‌ನಲ್ಲಿರುವ ಮಾಹಿತಿಗಳನ್ನು ವಿವರಿಸುವಲ್ಲಿ ಇವೆರಡೂ ಸಂಪೂರ್ಣ ವಿಫಲವಾಗಿವೆ.

# ಸಚಿವರೊಂದಿಗೆ ಒಂದು ಮುಖಾಮುಖಿ

ಸುಮಾರು ಏಳು ವರ್ಷಗಳ ಹಿಂದೆ, ಒಬ್ಬ ಸಚಿವರನ್ನು ನಾನು ನನ್ನ ಮನೆಗೆ ಆಮಂತ್ರಿಸಿದ್ದೆ. ನಾವು ಕುಳಿತಿದ್ದ ಆ ವಿಶೇಷ ಕೊಠಡಿಯಲ್ಲಿ ಮೇಜಿನ ಮೇಲೆ ಕುರ್‌ಆನ್‌ನ ಒಂದು ಪ್ರತಿಯಿತ್ತು. ಅದನ್ನು ಉಲ್ಟಾ ಇಡಲಾಗಿತ್ತು. ಆದ್ದರಿಂದ ಆ ಗ್ರಂಥ ಯಾವುದೆಂದು ಸಚಿವರಿಗೆ ಗೊತ್ತಿರಲಿಲ್ಲ. ನಮ್ಮ ಸಂಭಾಷಣೆಯ ಮಧ್ಯೆ ಕುರ್‌ಆನ್‌ನೆಡೆಗೆ ಬೊಟ್ಟು ಮಾಡುತ್ತಾ ನಾನು ಹೇಳಿದೆ: 'ನನಗೆ ಆ ಗ್ರಂಥದಲ್ಲಿ ಆತ್ಮವಿಶ್ವಾಸವಿದೆ.' ಕುರ್‌ಆನ್‌ನೆಡೆಗೆ ನೋಡುತ್ತಾ, ಆದರೆ ಅದು ಕುರ್‌ಆನ್ ಎಂಬುದು ಗೊತ್ತಿಲ್ಲದ ಸಚಿವ, 'ಸರಿ! ನಾನು ನಿಮ್ಮೊಂದಿಗೆ ಹೇಳುವುದೇನೆಂದರೆ ಆ ಗ್ರಂಥ ಬೈಬಲ್ ಅಲ್ಲವೆಂದಾದಲ್ಲಿ ಅದು ಮನುಷ್ಯ ರಚಿತ ಗ್ರಂಥವಾಗಿದೆ' ಎಂದರು. ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ ನಾನು, "ಆ ಗ್ರಂಥದಲ್ಲಿ ಏನಿದೆಯೆಂಬುದರ ಬಗ್ಗೆ ನಾನು ತಮಗೆ ಸ್ವಲ್ಪ ಹೇಳಿ ಕೊಡುತ್ತೇನೆ' ಎಂದೆ. ಮೂರ್ನಾಲ್ಕು ನಿಮಿಷಗಳೊಳಗೆ ಆ ಗ್ರಂಥದಲ್ಲಿರುವ ಕೆಲವು ವಿಷಯಗಳನ್ನು ನಾನು ಅವರಿಗೆ ಹೇಳಿಕೊಟ್ಟೆ. ಆ ಮೂರ್ನಾಲ್ಕು ನಿಮಿಷಗಳ ಬಳಿಕ ಅವರು ತಮ್ಮ ಕುಳಿತ ಭಂಗಿಯನ್ನು ಬದಲಾಯಿಸಿ 'ನೀವು ಹೇಳುವುದು ಸರಿ! *ಆ ಗ್ರಂಥ ಬರೆದದ್ದು ಮನುಷ್ಯನಲ್ಲ!* ಆ ಗ್ರಂಥವನ್ನು ಬರೆದದ್ದು ಪಿಶಾಚಿ!!' ಎಂದು ಘೋಷಿಸಿಯೇ ಬಿಟ್ಟರು. ಹಲವು ಕಾರಣಗಳಿಂದಾಗಿ, ಇಂತಹ ಒಂದು ಸ್ವಭಾವವನ್ನು ಹೊಂದಿರುವುದು ನಿಜಕ್ಕೂ ದುರದೃಷ್ಟಕರವಾಗಿದೆ. ಒಂದು ದಿಕ್ಕಿನಲ್ಲಿ, ಅದೊಂದು ಶೀಘ್ರ ಮತ್ತು ತುಚ್ಛ ನೆಪವಾಗಿದೆ. ಅಸ್ವಸ್ಥ ಸ್ಥಿತಿಯಿಂದ ಹೊರಬರಲು ಇರುವ ತುರ್ತುದ್ವಾರವಾಗಿದೆ.

ವಾಸ್ತವ ಸಂಗತಿಯೇನೆಂದರೆ, ಒಂದಿನ ಯಹೂದರು ದೃಕ್ಸಾಕ್ಷಿಯಾಗಿದ್ದ ಸಂದರ್ಭದಲ್ಲಿ ಯೇಸು(ﷺ) ಸತ್ತ ಮನುಷ್ಯನೊಬ್ಬನನ್ನು ಬದುಕಿಸಿದ್ದನ್ನು

ಪ್ರಸ್ತಾಪಿಸುವ ಪ್ರಸಿದ್ಧ ಘಟನೆಯೊಂದು **ಬೈಬಲ್**‌ನಲ್ಲಿದೆ. ಆ ಮನುಷ್ಯ ಸತ್ತು ನಾಲ್ಕು ದಿನಗಳಾಗಿದ್ದವು. ಯೇಸು ಅಲ್ಲಿಗೆ ಆಗಮಿಸಿ 'ಎದ್ದೇಳು!' ಎಂದಾಗ ಆ ಮನುಷ್ಯ ತನ್ನ ಗೋರಿಯಿಂದ ಎದ್ದು ಹೊರನಡೆದನು. ಈ ದೃಶ್ಯವನ್ನು ಕಂಡಾಗ ಅಲ್ಲಿ ಹಾಜರಿದ್ದ ಯಹೂದರ ಪೈಕಿ ಕೆಲವರು ಅವಿಶ್ವಾಸ ಧೋರಣೆಯೊಂದಿಗೆ 'ಇದು ಪಿಶಾಚಿ! ಪಿಶಾಚಿ ಇವನಿಗೆ ಸಹಾಯ ಮಾಡಿದೆ!!" ಎಂದರು. ಈ ಘಟನೆಯನ್ನು ಜಗತ್ತಿನಾದ್ಯಂತ ಇರುವ ಎಲ್ಲ ಚರ್ಚ್‌ಗಳಲ್ಲೂ ಪದೇ ಪದೇ ಉದ್ಧರಿಸಲಾಗುತ್ತದೆ. ಇದನ್ನು ಆಲಿಸುವಾಗ ಜನರು ಗೋಗರೆದು ಅಳುತ್ತಾ, 'ಓಹ್! ಅಂದು ನಾನಲ್ಲಿರುತ್ತಿದ್ದರೆ ಆ ಯಹೂದರಂತೆ ನಾನು ಮೂರ್ಖನಾಗಿರುತ್ತಿರಲಿಲ್ಲ!' ಎನ್ನುತ್ತಾರೆ. ಆದರೂ ವ್ಯಂಗ್ಯವಾಗಿ ಹೇಳುವುದಾದರೆ, ಈ ಜನರು ಯಹೂದರ ಅದೇ ಸ್ವಭಾವವನ್ನು ಅನುಕರಿಸುತ್ತಾರೆ. ಮೂರು ನಿಮಿಷಗಳಲ್ಲಿ ಸಂಕ್ಷಿಪ್ತವಾಗಿ ಕುರ್‌ಆನ್‌ನ ಒಂದು ಸಣ್ಣ ಭಾಗವನ್ನು ಇವರಿಗೆ ತಿಳಿಸಿಕೊಟ್ಟರೆ ಇವರು ಇಷ್ಟೇ ಹೇಳುವರು: "ಓಹ್! ಪಿಶಾಚಿ ಅದನ್ನು ಮಾಡಿದೆ! ಪಿಶಾಚಿ ಆ ಗ್ರಂಥವನ್ನು ಬರೆದಿದೆ!!' ಯಾಕೆಂದರೆ ಆಗ ಅವರು ನಿಜಕ್ಕೂ ಮೂಲೆಗೆ ಅದುಮಲ್ಪಡುತ್ತಾರೆ ಮತ್ತು ಇತರ ಯಾವ ಸಮರ್ಪಕ ಉತ್ತರವೂ ಇಲ್ಲದ ಕಾರಣ ಲಭ್ಯವಿರುವ ಈ ಶೀಘ್ರ ಮತ್ತು ತುಚ್ಛ ಉತ್ತರದಲ್ಲಿ ಆಶ್ರಯಪಡೆಯುತ್ತಾರೆ.

## ಕುರ್‌ಆನ್‌ನ ಮೂಲ

ಜನರು ಉಪಯೋಗಿಸುವ ಈ ಬಲಹೀನ ಸ್ಥಿತಿಯ ಬಗ್ಗೆಯಿರುವ ಇನ್ನೊಂದು ಉದಾಹರಣೆಯನ್ನು, ಮುಹಮ್ಮದ್(ﷺ)ರವರ ಸಂದೇಶದ ಮೂಲದ ಬಗ್ಗೆ ಮಕ್ಕಾ ನಿವಾಸಿಗಳು ನೀಡುವ ವಿವರಣೆಯಲ್ಲಿ ಕಾಣಬಹುದು. ಅವರು ಹೇಳುತ್ತಿದ್ದರು: "ಪಿಶಾಚಿಗಳು ಮುಹಮ್ಮದ್‌ಗೆ ಈ ಕುರ್‌ಆನನ್ನು

ತಂದುಕೊಡುತ್ತಾರೆ." ಎಲ್ಲ ವಿಮರ್ಶೆಗಳಿಗೂ ಉತ್ತರಿಸಿದಂತೆ ಕುರ್‌ಆನ್ ಇದಕ್ಕೂ ಉತ್ತರ ನೀಡಿದೆ. ಒಂದು ಸೂಕ್ತಿಯು (ಕುರ್‌ಆನ್ 68:51–52) ವಿಶೇಷವಾಗಿ ಹೀಗೆನ್ನುತ್ತದೆ:

﴿ وَيَقُولُونَ إِنَّهُ لَمَجْنُونٌ * وَمَا هُوَ إِلَّا ذِكْرٌ لِلْعَالَمِينَ ﴾

**"ಮತ್ತು ಖಂಡಿತವಾಗಿಯೂ ಇವರಿಗೆ (ಮುಹಮ್ಮದ್‌ರಿಗೆ) ಪಿಶಾಚಿ ಬಾಧೆಯುಂಟಾಗಿದೆಯೆಂದು ಅವರು ಹೇಳುತ್ತಾರೆ. ಆದರೆ ಅದು (ಕುರ್‌ಆನ್) ಸರ್ವಲೋಕಗಳಿಗಿರುವ ಒಂದು ಉಪದೇಶದ ಹೊರತು ಬೇರೇನೂ ಅಲ್ಲ." (ಕುರ್‌ಆನ್ 68:51–52)**

ಹೀಗೆ ಅಂತಹ ಒಂದು ಸಿದ್ಧಾಂತಕ್ಕೆ ಉತ್ತರವಾಗಿ ಕುರ್‌ಆನ್ ಒಂದು ತರ್ಕವನ್ನು ನೀಡುತ್ತದೆ. ವಾಸ್ತವವಾಗಿ, ಮುಹಮ್ಮದ್(ﷺ)ರಿಗೆ ಕುರ್‌ಆನನ್ನು ತಂದು ಕೊಟ್ಟಿರುವುದು ಪಿಶಾಚಿಗಳಾಗಿವೆ ಎಂಬ ಆರೋಪಗಳಿಗೆ ಉತ್ತರವಾಗಿ ಕುರ್‌ಆನ್‌ನಲ್ಲೇ ಅನೇಕ ತರ್ಕಗಳಿವೆ. ಉದಾಹರಣೆಗೆ 26ನೇ ಅಧ್ಯಾಯದಲ್ಲಿ ಅಲ್ಲಾಹು ದೃಢೀಕರಿಸಿ ಹೇಳುತ್ತಾನೆ:

﴿ وَمَا تَنَزَّلَتْ بِهِ الشَّيَاطِينُ * وَمَا يَنْبَغِي لَهُمْ وَمَا يَسْتَطِيعُونَ * إِنَّهُمْ عَنِ السَّمْعِ لَمَعْزُولُونَ﴾

**"ಪಿಶಾಚಿಗಳು ಇದನ್ನು ಅವತೀರ್ಣಗೊಳಿಸಿಲ್ಲ. ಇದು ಅವರಿಗೆ ಯೋಗ್ಯವಾದುದಲ್ಲ ಮತ್ತು ಅವರಿಗೆ ಇದು ಸಾಧ್ಯವೂ ಅಲ್ಲ. ಖಂಡಿತವಾಗಿಯೂ ಆಲಿಸುವುದರಿಂದ ಅವರನ್ನು ಬಹುದೂರವಿರಿಸಲಾಗಿದೆ." (ಕುರ್‌ಆನ್ 26:210–212)**

ಇನ್ನೊಂದು ಕಡೆ (ಕುರ್‌ಆನ್ 16:98) ಅಲ್ಲಾಹು ನಮಗೆ ಸ್ಪಷ್ಟವಾಗಿ ನಿರ್ದೇಶಿಸುತ್ತಾನೆ:

﴿ فَإِذَا قَرَأْتَ الْقُرْآنَ فَاسْتَعِذْ بِاللَّهِ مِنَ الشَّيْطَانِ الرَّجِيمِ ﴾

**“ಆದ್ದರಿಂದ ನೀನು ಕುರ್‌ಆನ್ ಪಾರಾಯಣ ಮಾಡುವಾಗ ಶಪಿಸಲ್ಪಟ್ಟ ಪಿಶಾಚಿಯಿಂದ ಅಲ್ಲಾಹನೊಂದಿಗೆ ರಕ್ಷೆಯನ್ನು ಬೇಡು.” (ಕುರ್‌ಆನ್ 16:98)**

ಈಗ ಹೇಳಿ! ಹೀಗಾ ಪಿಶಾಚಿ ಒಂದು ಗ್ರಂಥವನ್ನು ಬರೆದುಕೊಡುವ ರೀತಿ? “ನನ್ನ ಗ್ರಂಥವನ್ನು ಪಾರಾಯಣ ಮಾಡುವ ಮುನ್ನ ನನ್ನಿಂದ ರಕ್ಷಿಸುವಂತೆ ಅಲ್ಲಾಹನೊಂದಿಗೆ ಬೇಡು” ಎಂದು ಅವನು ಹೇಳುವನೇ? ಇದೊಂದು ದೊಡ್ಡ, ಬಹುದೊಡ್ಡ ಹಾಸ್ಯವಾಗಿದೆ! ಬಹುಶಃ ಒಬ್ಬ ಮನುಷ್ಯನಿಗೆ ಹೀಗೆ ಬರೆಯಲು ಸಾಧ್ಯವಿದೆ. ಆದರೆ ಪಿಶಾಚಿ ಇದನ್ನು ಮಾಡುವನೇ? ಈ ವಿಷಯದಲ್ಲಿ ಒಂದು ಸಮಾಪ್ತಿಗೆ ಬರಲು ಸಾಧ್ಯವಿಲ್ಲವೆಂದು ಹೆಚ್ಚಿನವರೂ ಒಪ್ಪಿಕೊಳ್ಳುತ್ತಾರೆ. ಒಂದು ಕಡೆ ಅವರು, ಪಿಶಾಚಿ ಅಂತಹ ಕಾರ್ಯ ಮಾಡಲಾರ; ಇನ್ನು ಆತನಿಗೆ ಅದನ್ನು ಮಾಡಲು ಸಾಧ್ಯವಿದ್ದರೂ ದೇವನು ಅನುಮತಿಸಲಾರ ಎನ್ನುತ್ತಾರೆ. ಇನ್ನೊಂದು ಕಡೆ ಪಿಶಾಚಿಯು ದೇವರಿಗಿಂತ ಸ್ವಲ್ಪ ಕಮ್ಮಿ ಎಂದು ಅವರು ನಂಬುತ್ತಾರೆ. ವಾಸ್ತವವಾಗಿ, ದೇವರಿಗೆ ಮಾಡಲು ಸಾಧ್ಯವಿರುವುದೆಲ್ಲವೂ ಪಿಶಾಚಿಗೂ ಮಾಡಲು ಸಾಧ್ಯವಿದೆ ಎಂದು ಅವರು ಆಪಾದಿಸುತ್ತಾರೆ. ಹೀಗೆ ಕುರ್‌ಆನ್‌ನೆಡೆಗೆ ನೋಡುವಾಗ ಅದು ಎಷ್ಟೊಂದು ವಿಸ್ಮಯಕರವಾಗಿದೆ ಎಂಬುದನ್ನು ಕಂಡು ಚಕಿತರಾಗಿಯೂ ಸಹ ಅವರು ಹಟತೊಟ್ಟು ಹೇಳುತ್ತಾರೆ: “ಇದನ್ನು ಬರೆದಿದ್ದು ಪಿಶಾಚಿ!”

ಅಲ್ಲಾಹನಿಗೆ ಸ್ತುತಿ, ಮುಸ್ಲಿಮರಿಗೆ ಅಂತಹ ಸ್ವಭಾವವಿಲ್ಲ. ಪಿಶಾಚಿಗೆ ಕೆಲವು ಸಾಮರ್ಥ್ಯಗಳಿದ್ದರೂ ಕೂಡ ಆ ಸಾಮರ್ಥ್ಯವು ಅಲ್ಲಾಹನ ಸಾಮರ್ಥ್ಯಗಳಿಂದ ಸಂಪೂರ್ಣ ಬೇರ್ಪಟ್ಟು ನಿಂತಿದೆ. ಈ ರೀತಿ ವಿಶ್ವಾಸವಿಡದ ಮುಸ್ಲಿಮರು ಎಂದೂ ಮುಸ್ಲಿಮನಾಗಲಾರರು. ಪಿಶಾಚಿ ಬಹಳ ಸುಲಭವಾಗಿ ತಪ್ಪು ಮಾಡುತ್ತಾನಾದ್ದರಿಂದ, ಆತ ಒಂದು ಗ್ರಂಥವನ್ನು ಬರೆದರೆ ತನಗೆ ತಾನೇ ವಿರೋಧಾಭಾಸ ಮಾಡಿಕೊಳ್ಳುವನು ಎನ್ನುವುದು ನಿರೀಕ್ಷಿತವೆಂಬುದು

ಮುಸ್ಲಿಮೇತರರೂ ಸಹ ಒಪ್ಪಿಕೊಳ್ಳುವ ಒಂದು ಸಂಗತಿಯಾಗಿದೆ. ಹೀಗಿರುವಾಗ ಕುರ್‌ಆನ್ ಹೇಳುತ್ತದೆ:

﴿ أَفَلَا يَتَدَبَّرُونَ الْقُرْآنَ وَلَوْ كَانَ مِنْ عِنْدِ غَيْرِ اللَّهِ لَوَجَدُوا فِيهِ اخْتِلَافًا كَثِيرًا ﴾

**"ಅವರು ಕುರ್‌ಆನ್‌ನ ಬಗ್ಗೆ ಚಿಂತಿಸುವುದಿಲ್ಲವೇ? ಅದು ಅಲ್ಲಾಹನ ಹೊರತು ಬೇರೆ ಕಡೆಯಿಂದ ಬಂದದ್ದಾಗಿದ್ದರೆ ಅವರು ಅದರಲ್ಲಿ ಅನೇಕಾನೇಕ ವಿರುದ್ಧೋಕ್ತಿಗಳನ್ನು ಕಾಣುತ್ತಿದ್ದರು." (ಕುರ್‌ಆನ್ 4:82)**

## ಮೈಥೋಮೇನಿಯಾ

ಕುರ್‌ಆನ್‌ನಲ್ಲಿರುವ ವಿವರಣಾತೀತವಾದ ಸೂಕ್ತಿಗಳನ್ನು ನ್ಯಾಯೀಕರಿಸಲು ಮುಸ್ಲಿಮೇತರರು ಮುಂದಿಡುವುದು ವ್ಯರ್ಥ ನೆಪಗಳಷ್ಟೇ ಆಗಿರುವುದರ ಜೊತೆಗೆ ಅವರು ಅದಕ್ಕಾಗಿ ಮುಂದಿಡುವ ಇನ್ನೊಂದು ತಂತ್ರವೂ ಇದೆ. ಅದೇನೆಂದರೆ ಮುಹಮ್ಮದ್(ﷺ)ರವರು ಮತಿ ಭ್ರಾಂತರೂ ಸುಳ್ಳುಗಾರರೂ ಆಗಿದ್ದರು ಎಂಬ ಎರಡೂ ಸಿದ್ಧಾಂತಗಳನ್ನು ಸಮನ್ವಯಗೊಳಿಸುವ ತಂತ್ರ. ಮೊದಲನೆಯದಾಗಿ, ಮುಹಮ್ಮದ್(ﷺ)ರವರು ಮತಿಭ್ರಾಂತರಾಗಿದ್ದಾರೆ ಮತ್ತು ತನಗುಂಟಾಗುವ ಮನೋವಿಭ್ರಾಂತಿಯಿಂದಾಗಿ ಅವರು ಸುಳ್ಳು ಹೇಳುತ್ತಾ ಜನರನ್ನು ದಾರಿಗೆಡಿಸಿದ್ದಾರೆ ಎಂಬುದನ್ನು ಈ ಮಂದಿ ಅನುಮೋದಿಸುತ್ತಾರೆ. ಮನಶಾಸ್ತ್ರದಲ್ಲಿ ಇದನ್ನು *'ಮೈಥೋಮೇನಿಯಾ'* ಎನ್ನಲಾಗುತ್ತದೆ. ಮೈಥೋಮೇನಿಯಾ ಎಂದರೆ ಒಬ್ಬ ವ್ಯಕ್ತಿ ಸುಮ್ಮನೆ ಸುಳ್ಳು ಹೇಳುತ್ತಾ ತಾನು ಹೇಳುವ ಸುಳ್ಳನ್ನು ಸತ್ಯವೆಂದು ನಂಬುವುದು. ಮುಹಮ್ಮದ್(ﷺ)ರವರು ಈ ರೋಗದಿಂದ ಬಳಲುತ್ತಿದ್ದರೆಂದು ಮುಸ್ಲಿಮೇತರರು ಹೇಳುತ್ತಾರೆ. ಆದರೆ ಈ

ಅನುಮೋದನೆಯಲ್ಲಿರುವ ಒಂದೇ ಒಂದು ತೊಡಕು ಏನೆಂದರೆ *ಮೈಥೋಮೇನಿಯಾದಿಂದ* ಬಳಲುತ್ತಿರುವ ವ್ಯಕ್ತಿಗೆ ವಾಸ್ತವಾಂಶಗಳನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ಆದರೆ ಕುರ್‌ಆನ್ ಸಂಪೂರ್ಣವಾಗಿ ವಾಸ್ತವಾಂಶಗಳ ಮೇಲೆ ನೆಲೆನಿಂತಿದೆ. ಅದರಲ್ಲಿರುವ ಸರ್ವ ವಿಷಯಗಳನ್ನೂ ಸಂಶೋಧನೆಗೈದು ಸತ್ಯವೆಂದು ರುಜುವಾತುಪಡಿಸಬಹುದು. *ಮೈಥೋಮೇನಿಯಾ* ದಿಂದ ಬಳಲುವ ವ್ಯಕ್ತಿಗೆ ವಾಸ್ತವಾಂಶಗಳನ್ನು ಎದುರಿಸು ವುದು ಸಾಧ್ಯವಿಲ್ಲ ಎಂಬ ಕಾರಣದಿಂದಲೇ ವಾಸ್ತವಾಂಶಗಳನ್ನು ವಿವರಿಸುವ ಮೂಲಕವೇ ಅಂಥಹ ಒಬ್ಬ ರೋಗಿಗೆ ವೈದ್ಯರು ಚಿಕಿತ್ಸೆ ನೀಡುತ್ತಾರೆ.

ಉದಾಹರಣೆಗೆ: ಮಾನಸಿಕ ರೋಗಿಯಾಗಿರುವ ಒಬ್ಬ ವ್ಯಕ್ತಿ 'ನಾನು ಇಂಗ್ಲೆಂಡಿನ ದೊರೆ' ಎಂದು ವಾದಿಸಿದರೆ, ಮನಶಾಸ್ತ್ರಜ್ಞರು ಅವನೊಂದಿಗೆ 'ನೀನು ಇಂಗ್ಲೆಂಡಿನ ದೊರೆಯಲ್ಲ; ನೀನೊಬ್ಬ ಹುಚ್ಚ' ಎಂದು ಹೇಳುವುದಿಲ್ಲ. ವೈದ್ಯರು ಹಾಗೆ ಮಾಡುವುದೇ ಇಲ್ಲ. ಬದಲಾಗಿ ವೈದ್ಯರು ವಾಸ್ತವಾಂಶಗಳ ಮೂಲಕ ಆ ರೋಗಿಯನ್ನು ಎದುರಿಸುತ್ತಾ ಹೀಗೆನ್ನುತ್ತಾರೆ: 'ಸರಿ! ನೀನು ಇಂಗ್ಲೆಂಡಿನ ದೊರೆ. ಹಾಗಾದರೆ ಇಂದು ನಿನ್ನ ರಾಣಿ ಎಲ್ಲಿದ್ದಾಳೆ? ನಿನ್ನ ಪ್ರಧಾನಮಂತ್ರಿ ಎಲ್ಲಿದ್ದಾನೆ? ನಿನ್ನ ಕಾವಲುಭಟರು ಎಲ್ಲಿದ್ದಾರೆ?' ಈಗ, ಇಂಥಹ ಪ್ರಶ್ನೆಗಳೊಂದಿಗೆ ವ್ಯವಹರಿಸಲು ಆ ರೋಗಿಗೆ ಕಷ್ಟವಾಗುತ್ತದೆ. ಅವನು ಕೆಲವು ನೆಪಗಳನ್ನು ಒಡ್ಡಲು ಯತ್ನಿಸುತ್ತಾನೆ. 'ಉಹ್...! ರಾಣಿ...!! ಆಕೆ ಈಗ ತವರುಮನೆಗೆ ಹೋಗಿದ್ದಾಳೆ...!!! ಉಹ್...! ಪ್ರಧಾನ ಮಂತ್ರಿ...!! ಸರಿ, ಆತ ಸತ್ತು ಹೋಗಿದ್ದಾನೆ...!!!'

ಹೀಗೆ ಆ ರೋಗಿಗೆ ವಾಸ್ತವಗಳನ್ನು ಎದುರಿಸಲು ಸಾಧ್ಯವಾಗುವುದಿಲ್ಲ ವಾದ್ದರಿಂದ ಆತ ಕಾಲಕ್ರಮೇಣ ರೋಗದಿಂದ ಗುಣಮುಖನಾಗುತ್ತಾನೆ. ಮನಶಾಸ್ತ್ರಜ್ಞರು ಸಾಕಷ್ಟು ವಾಸ್ತವಾಂಶಗಳ ಮೂಲಕ ಆತನನ್ನು ಎದುರಿಸುವುದನ್ನು ಮುಂದುವರಿಸ ತೊಡಗಿದರೆ, ಕೊನೆಗೆ ಆ ರೋಗಿ

ಸತ್ಯವನ್ನು ಅರಿತುಕೊಂಡು "ನಾನು ಇಂಗ್ಲೆಂಡಿನ ದೊರೆಯಲ್ಲವೆಂದು ನಾನು ಭಾವಿಸುತ್ತೇನೆ" ಎನ್ನುತ್ತಾನೆ.

ಮನಶಾಸ್ತ್ರಜ್ಞರು ಮೈಥೋಮೇನಿಯಾ ರೋಗಿಗೆ ಚಿಕಿತ್ಸೆ ನೀಡುವ ಅದೇ ಧಾಟಿಯಲ್ಲಿ ಕುರ್‌ಆನ್ ಅದನ್ನು ಓದುವ ಜನರನ್ನು ಸಮೀಪಿಸುತ್ತದೆ. ಉದಾಹರಣೆಗೆ ಕುರ್‌ಆನ್‌ನಲ್ಲಿ (ಸೂರಃ ಯೂನುಸ್ 10:57) ಒಂದು ಸೂಕ್ತಿಯಿದೆ. ಅದು ಹೀಗಿದೆ:

﴿ يَا أَيُّهَا النَّاسُ قَدْ جَاءَتْكُمْ مَوْعِظَةٌ مِنْ رَبِّكُمْ وَشِفَاءٌ لِمَا فِي الصُّدُورِ وَهُدًى وَرَحْمَةٌ لِلْمُؤْمِنِينَ ﴾

**"ಓ ಜನರೇ, ನಿಮಗೆ ನಿಮ್ಮ ಒಡೆಯನ ವತಿಯಿಂದ ಒಂದು ಉಪದೇಶವೂ (ಅಂದರೆ ಕುರ್‌ಆನ್), ಹೃದಯಗಳಲ್ಲಿರುವುದನ್ನು ವಾಸಿ ಮಾಡುವ ಶುಶ್ರೂಷೆಯೂ, ಮಾರ್ಗದರ್ಶನವೂ, ವಿಶ್ವಾಸಿಗಳಿಗೆ ಕಾರುಣ್ಯವೂ ಬಂದಿದೆ." (ಕುರ್‌ಆನ್ 10:57)**

ಮೊದಲ ನೋಟದಲ್ಲಿ ಈ ಸೂಕ್ತಿ ಅಸ್ಪಷ್ಟವಾಗಿ ಗೋಚರಿಸಿದರೂ ಈ ಮೇಲೆ ವಿವರಿಸಿದ ಉದಾಹರಣೆಯ ಬೆಳಕಿನಲ್ಲಿ ನೋಡುವಾಗ ಇದರ ಅರ್ಥ ಅತ್ಯಂತ ಸ್ಪಷ್ಟವಾಗುತ್ತದೆ. ವಾಸ್ತವವಾಗಿ, ಕುರ್‌ಆನನ್ನು ಓದುವ ಮೂಲಕ ಭ್ರಾಂತಿಯಿರುವ ಒಬ್ಬ ವ್ಯಕ್ತಿ ಗುಣಮುಖನಾಗುತ್ತಾನೆ. ಮೂಲಭೂತವಾಗಿ, ಕುರ್‌ಆನ್ ಒಂದು ಚಿಕಿತ್ಸೆಯಾಗಿದೆ. ವಾಸ್ತವಾಂಶಗಳನ್ನು ಮುಂದಿಡುವ ಮೂಲಕ ಅದು ಮಾನಸಿಕವಾಗಿ ಮತಿಭ್ರಾಂತನಾಗಿರುವ ವ್ಯಕ್ತಿಯನ್ನು ಗುಣಪಡಿಸುತ್ತದೆ. ಅಂದರೆ ಕುರ್‌ಆನಿನ ಉದ್ದಗಲಕ್ಕೂ ಅಸ್ತಿತ್ವದಲ್ಲಿರುವ ಒಂದು ತತ್ವ ಹೀಗಿದೆ: "ಓ ಜನರೇ, ನೀವು ಈ ವಿಷಯದ ಬಗ್ಗೆ ಇಂತಹ ಮತ್ತು ಇಂತಹ ಮಾತುಗಳನ್ನು ಹೇಳುತ್ತೀರಿ! ಹಾಗಾದರೆ ಅಂತಹ ಮತ್ತು ಅಂತಹ ಮಾತುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅದು ನಿಮಗೆ ಗೊತ್ತಿರುವಾಗ ನೀವು ಇದನ್ನು ಹೇಳುವುದು ಸರಿಯಾ?" ಪ್ರಸಕ್ತವಾಗಿರುವುದು ಏನು ಮತ್ತು ಗಮನಾರ್ಹವಾಗಿರುವುದು

ಯಾವುದು ಎಂಬುದನ್ನು ಪರಿಗಣಿಸುವಂತೆ ಅದು ಬಲವಂತಪಡಿಸುವುದರ ಜೊತೆಗೆ ಅಲ್ಲಾಹನಿಂದ ಮನುಕುಲಕ್ಕೆ ಪ್ರಸ್ತುತಪಡಿಸಲಾದ ವಾಸ್ತವಾಂಶಗಳನ್ನು ಕ್ಷುಲ್ಲಕ ಸಿದ್ಧಾಂತ ಮತ್ತು ನೆಪಗಳ ಮೂಲಕ ಸುಲಭವಾಗಿ ವಿವರಿಸಬಹುದೆಂಬ ಭ್ರಮೆಯನ್ನು ಗುಣಪಡಿಸುತ್ತದೆ.

## ನ್ಯೂ ಕೆಥೋಲಿಕ್ ಎನ್ಸೈಕ್ಲೋಪೀಡಿಯಾ

ವಾಸ್ತವಾಂಶಗಳ ಮೂಲಕ ಜನರನ್ನು ಎದುರಿಸುವುದು ಎಂಬ ಈ ತತ್ವ ಅನೇಕ ಮಂದಿ ಮುಸ್ಲಿಮೇತರರ ಗಮನ ಸೆಳೆದಿದೆ. ವಾಸ್ತವವಾಗಿ, ಈ ವಿಷಯಕ್ಕೆ ಸಂಬಂಧಿಸಿ ನ್ಯೂ ಕೆಥೋಲಿಕ್ ಎನ್ಸೈಕ್ಲೋಪೀಡಿಯಾ (New Catholic Encyclopedia)ದಲ್ಲಿ ಒಂದು ಕುತೂಹಲಕಾರಿ ಉಲ್ಲೇಖವಿದೆ. ಕುರ್‌ಆನಿನ ಬಗ್ಗೆ ಬರೆಯಲಾದ ಲೇಖನದಲ್ಲಿ ಕೆಥೋಲಿಕ್ ಚರ್ಚ್ ಹೀಗೆನ್ನುತ್ತದೆ:

"Over the centuries, many theories have been offered as to the origin of the Quran... Today no sensible man accepts any of these theories!!"

**"ಶತಮಾನಗಳಿಂದ, ಕುರ್‌ಆನಿನ ಉಗಮದ ಬಗ್ಗೆ ಅನೇಕ ಸಿದ್ಧಾಂತಗಳನ್ನು ಪ್ರಸ್ತುತಪಡಿಸಲಾಗಿದೆ... ಆದರೆ ವಿವೇಕವಿರುವ ಯಾವ ವ್ಯಕ್ತಿಯೂ ಇಂದು ಇಂತಹ ಸಿದ್ಧಾಂತಗಳ ಪೈಕಿ ಒಂದನ್ನೂ ಸ್ವೀಕರಿಸುವುದಿಲ್ಲ!!"**

ಶತಮಾನಗಳ ಹಿಂದಿನಿಂದಲೇ ಅಸ್ತಿತ್ವದಲ್ಲಿರುವ ಕೆಥೋಲಿಕ್ ಚರ್ಚ್ ಈಗ ಕುರ್‌ಆನನ್ನು ವಿವರಿಸಲು ಮಾಡಲಾಗುವ ಈ ನಿಷ್ಪ್ರಯೋಜಕ ಪ್ರಯತ್ನ ಗಳೆಲ್ಲವನ್ನೂ ನಿರಾಕರಿಸುತ್ತಿದೆ.

ಸತ್ಯವಾಗಿ ಹೇಳುವುದಾದರೆ, ಕುರ್‌ಆನ್ ಎಂಬುದು ಕೆಥೋಲಿಕ್ ಚರ್ಚ್‌ಗೆ ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಅದೊಂದು ಅವತೀರ್ಣ (revelation)ವಾಗಿರುವ ಕಾರಣ ಅದನ್ನು ಅಧ್ಯಯನ ಮಾಡಬೇಕೆಂದು ಅದು ಹೇಳುತ್ತದೆ. ಆದರೆ ವಾಸ್ತವವಾಗಿ, ಅದು ಅವತೀರ್ಣವಲ್ಲ ಎಂಬುದನ್ನು ಸಾಬೀತುಪಡಿಸುವಂತಹ ಪುರಾವೆಯನ್ನು ಕಾಣಲು ಅವರು ತವಕಿಸುತ್ತಾರೆ. ಆದರೆ ಅವರಿಗೆ ಅದು ಸಾಧ್ಯವಾಗುತ್ತಿಲ್ಲ. ಕುರ್‌ಆನಿನ ಬಗ್ಗೆ ಒಂದು ಸ್ಪಷ್ಟ ವಿವರಣೆ ನೀಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಆದರೆ ಅವರು ಕನಿಷ್ಠ ಪಕ್ಷ ತಮ್ಮ ಸಂಶೋಧನೆಯಲ್ಲಾದರೂ ಸತ್ಯಸಂಧರಾಗಿದ್ದಾರೆ. ಅವರಿಗೆ ಕಂಡು ಬರುವ ಅವಿವೇಕವಾದ ಯಾವ ವಿವರಣೆಯನ್ನೂ ಅವರು ಸ್ವೀಕರಿಸುವುದಿಲ್ಲ. ಚರ್ಚ್ ಹೇಳುವ ಪ್ರಕಾರ ಕಳೆದ ಹದಿನಾಲ್ಕು ಶತಮಾನಗಳಿಂದ ಕುರ್‌ಆನಿನ ಬಗ್ಗೆ ಒಂದು ವಿವೇಕಯುಕ್ತವಾದ ಸ್ಪಷ್ಟ ವಿವರಣೆ ನೀಡಲು ಅದಕ್ಕೆ ಸಾಧ್ಯವಾಗಿಲ್ಲ. ಕನಿಷ್ಠ ಪಕ್ಷ ಕುರ್‌ಆನ್ ಎಂಬುದು ತೀರಾ ಅಲ್ಲಗಳೆಯಲು ಸಾಧ್ಯವಾಗದಂತಹ ವಿಷಯವಾಗಿದೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ಇತರ ಜನರು ಪ್ರಾಮಾಣಿಕತೆಯ ವಿಷಯದಲ್ಲಿ ತೀರಾ ಕೆಳಮಟ್ಟದಲ್ಲಿದ್ದಾರೆ. ಅವರು ತಕ್ಷಣ ಹೇಳುತ್ತಾರೆ: "ಓಹ್! ಕುರ್‌ಆನ್ ಇಲ್ಲಿಂದ ಬಂದಿದೆ. ಕುರ್‌ಆನ್ ಅಲ್ಲಿಂದ ಬಂದಿದೆ." ಹೆಚ್ಚಿನ ಸಂದರ್ಭಗಳಲ್ಲೂ ತಾವೇನು ಹೇಳುತ್ತಿದ್ದೇವೆ ಎಂಬುದರ ಬಗ್ಗೆ ಕನಿಷ್ಠ ಪರಿಜ್ಞಾನವೂ ಅವರಿಗಿರುವುದಿಲ್ಲ.

ಕೆಥೋಲಿಕ್ ಚರ್ಚ್‌ನ ಈ ಮೇಲಿನ ಹೇಳಿಕೆಯು ಒಬ್ಬ ಸಾಮಾನ್ಯ ಕ್ರೈಸ್ತನನ್ನು ಇಕ್ಕಟ್ಟಿನಲ್ಲಿ ಸಿಲುಕಿಸುತ್ತದೆ. ಬಹುಶಃ ಕುರ್‌ಆನಿನ ಉಗಮದ ಬಗ್ಗೆ ಅವನಲ್ಲಿ ಅವನದ್ದೇ ಆದ ಊಹೆಗಳಿವೆ. ಆದರೆ ಚರ್ಚ್‌ನ ಒಬ್ಬ ಸದಸ್ಯ ಎಂಬ ನೆಲೆಯಲ್ಲಿ ತನ್ನ ಊಹೆ ಪ್ರಕಾರ ನಡೆದುಕೊಳ್ಳಲು ಅವನಿಗೆ ಸಾಧ್ಯವಾಗುವುದಿಲ್ಲ.

ಹಾಗೆ ನಡೆದುಕೊಂಡರೆ ಅದು ಚರ್ಚ್‌ಗೆ ತೋರಿಸುವ ಅವಿಧೇಯತೆಯೂ, ಅಪಮರ್ಯಾದೆಯೂ ಆಗುತ್ತದೆ. ಒಂದು ವಿಷಯದಲ್ಲಿ ಕೆಥೋಲಿಕ್ ಚರ್ಚ್ ಯಾವ ತೀರ್ಮಾನ ಕೈಗೊಳ್ಳುತ್ತದೋ ಅದನ್ನು ಪ್ರಶ್ನಾತೀತವಾಗಿ ಅಂಗೀಕರಿಸುವುದು ಮತ್ತು ಅದರ ಶಿಕ್ಷಣಗಳನ್ನು ತನ್ನ ದೈನಂದಿನ ಬದುಕಿನಲ್ಲಿ ಅಳವಡಿಸುವುದು ಅದರ ಸದಸ್ಯನಾಗಿರುವ ವ್ಯಕ್ತಿಗೆ ಕಡ್ಡಾಯವಾಗಿದೆ. ಆದ್ದರಿಂದ "ಕುರ್‌ಆನಿನ ಬಗ್ಗೆ ದೃಢೀಕರಿಸಲ್ಪಡದಂತಹ ವರದಿಗಳಿಗೆ ಕಿವಿಗೊಡಬಾರದು" ಎಂದು ಕೆಥೋಲಿಕ್ ಚರ್ಚ್ ಮೊತ್ತವಾಗಿ ಹೇಳುವುದಾದರೆ ಅದನ್ನೇ ಅಲ್ಲವೇ ಮುಸ್ಲಿಮರು ಕೂಡ ಹೇಳುತ್ತಿರುವುದು? ಕುರ್‌ಆನಿನ ಬಗ್ಗೆ ನಾವು ಅರಿಯ ಬೇಕಾದುದು ಏನೋ ಇದೆ ಎಂದು ಚರ್ಚ್ ಹೇಳುವಾಗ ಅದನ್ನು ಅಂಗೀಕರಿಸುವ ಜನರಿಗೆ, ಇದೇ ತತ್ವವನ್ನು ಮುಸ್ಲಿಮರು ಹೇಳುವಾಗ ಅವರು ಕಟುಮನಸ್ಕರೂ, ಕ್ರೂರರೂ ಆಗಿ ತೋರುವುದೇಕೆ? ಇದು ತಿಳುವಳಿಕೆಯಿರುವ ಜನರು ಚಿಂತಿಸಬೇಕಾದ ಮತ್ತು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ಒಂದು ವಿಷಯವಾಗಿದೆ!

## ಬುದ್ಧಿವಂತನ ಸತ್ಯಸಾಕ್ಷ್ಯ

ಇತ್ತೀಚೆಗೆ, ಪ್ರಸಿದ್ಧ ಕ್ರೈಸ್ತ ಕೆಥೋಲಿಕ್ ಚರ್ಚೊಂದರ ಹಾನ್ಸ್ ಎಂಬ ಹೆಸರಿನ ಬುದ್ಧಿವಂತ ಮೇಧಾವಿಯೊಬ್ಬರು ಕುರ್‌ಆನನ್ನು ಅಧ್ಯಯನ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈ ವ್ಯಕ್ತಿ ಕೆಥೋಲಿಕ್ ಚರ್ಚ್‌ನಲ್ಲಿ ಅತ್ಯಧಿಕ ಗೌರವವಿರುವ ವ್ಯಕ್ತಿಯಾಗಿದ್ದರು. ಕುರ್‌ಆನನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ಬಳಿಕ ತನ್ನ ಸಂಶೋಧನೆಯ ಸಮಾಪ್ತಿಯಾಗಿ ಅವರು ಹೇಳಿದರು:

"God has spoken to man through the man, Muhammad."

**“ದೇವನು ಮುಹಮ್ಮದ್ ಎಂಬ ಮನುಷ್ಯನ ಮೂಲಕ ಮನುಷ್ಯನೊಂದಿಗೆ ಮಾತನಾಡಿದ್ದಾನೆ.”**

ಇದು ಕೆಥೋಲಿಕ್ ಚರ್ಚ್‌ನಲ್ಲಿ ಹಿರಿಯ ಮೇಧಾವಿಯಾಗಿರುವ ಒಬ್ಬ ಮುಸ್ಲಿಮೇತರ ವ್ಯಕ್ತಿಯ ಮೂಲಕ ಬಂದ ಅಭಿಪ್ರಾಯವಾಗಿದೆ!

ಈ ವ್ಯಕ್ತಿಯ ಅಭಿಪ್ರಾಯದೊಂದಿಗೆ ಪೋಪ್ ಸಹಮತ ವ್ಯಕ್ತಪಡಿಸುವರು ಎಂದು ನಾನು ಭಾವಿಸುವುದಿಲ್ಲ. ಆದರೆ ಇಂತಹ ಒಬ್ಬ ಗಮನಾರ್ಹ, ಪ್ರಸಿದ್ಧ ವ್ಯಕ್ತಿಯ ಅಭಿಪ್ರಾಯವು ಮುಸ್ಲಿಮರ ಸ್ಥಾನಮಾನಕ್ಕೆ ಬೆಲೆ ಕಲ್ಪಿಸುವುದರಲ್ಲಿ ಹೆಚ್ಚು ತೂಕ ಹೊಂದಿರಬೇಕಾದ ಅಭಿಪ್ರಾಯವಾಗಬೇಕಾಗಿದೆ. ಕುರ್‌ಆನ್ ಎಂಬುದು ತೀರಾ ನಗಣ್ಯವಾಗಿ ತಳ್ಳಿಹಾಕುವಂತದ್ದಲ್ಲ ಮತ್ತು ಅದರಲ್ಲಿರುವ ವಚನಗಳ ಮೂಲವು ದೇವನಾಗಿದ್ದಾನೆ ಎಂಬ ವಾಸ್ತವವನ್ನು ಜನರ ಮುಂದೆ ತೆರೆದಿಟ್ಟ ಕಾರಣಕ್ಕಾಗಿ ಈತ ಪ್ರಶಂಸಾರ್ಹನಾಗಬೇಕಾಗಿದೆ.

ಈ ಮೇಲೆ ಉದ್ಧರಿಸಲಾದ ಮಾಹಿತಿಗಳ ಅಧಾರದ ಮೇಲೆ ಕುರ್‌ಆನನ್ನು ಬದಿಗೆ ತಳ್ಳಲಿರುವ ಸಾಧ್ಯತೆಗಳೆಲ್ಲವೂ ಬರಿದಾಗಿವೆ. ಆದ್ದರಿಂದ ಕುರ್‌ಆನನ್ನು ತಿರಸ್ಕರಿಸಲು ಬೇರೊಂದು ಸಾಧ್ಯತೆಯನ್ನು ಹುಡುಕುವ ಅವಕಾಶ ಇನ್ನು ಯಾವುದೂ ಅಸ್ತಿತ್ವದಲ್ಲಿಲ್ಲ.

## ಪುರಾವೆಯ ಹೊರೆ ವಿಮರ್ಶಕರ ಮೇಲಿದೆ

ಕುರ್‌ಆನ್ ದೈವಿಕವಾಗಿ ಅವತೀರ್ಣಗೊಂಡ ಗ್ರಂಥ ಅಲ್ಲವೆಂದಾದರೆ ಅದೊಂದು ಮೋಸಗೊಳಿಸುವ ಗ್ರಂಥವಾಗಿದೆ. ಅದು ಮೋಸಗೊಳಿಸುವ ಗ್ರಂಥವೆಂದಾದರೆ ಹೀಗೊಂದು ಪ್ರಶ್ನೆ ಕೇಳಲಾಗುತ್ತದೆ: “ಅದರ ಮೂಲ

ಯಾವುದು? ಅದು ನಮ್ಮನ್ನು ಎಲ್ಲಿ ಮೋಸಗೊಳಿಸುತ್ತದೆ?" ನಿಜ! ಈ ಪ್ರಶ್ನೆಗಳಿಗಿರುವ ನಿಜವಾದ ಉತ್ತರಗಳು ಕುರ್‌ಆನಿನ ವಿಶ್ವಾಸಾರ್ಹತೆಯೆಡೆಗೆ ಬೆಳಕು ಚೆಲ್ಲುವುದು ಮಾತ್ರವಲ್ಲದೆ ಅವಿಶ್ವಾಸಿಗಳ ಕಹಿಯಾದ ಆಧಾರರಹಿತ ಅರೋಪಗಳನ್ನು ನಿಶ್ಶಬ್ದಗೊಳಿಸುತ್ತದೆ.

ಕುರ್‌ಆನ್ ಮೋಸಗೊಳಿಸುವ ಗ್ರಂಥವಾಗಿದೆ ಎಂಬ ತಮ್ಮ ವಾದದಲ್ಲಿ ಜನರು ಅಚಲವಾಗಿ ನಿಲ್ಲುವುದಾದರೆ ತಮ್ಮ ವಾದವನ್ನು ಎತ್ತಿಹಿಡಿಯುವ ಪುರಾವೆಯನ್ನು ತರುವುದು ಅವರಿಗೆ ಕಡ್ಡಾಯವಾಗಿದೆ. ಪುರಾವೆಯ ಹೊರೆ ಅವರ ಮೇಲಿದೆ. ನಮ್ಮ ಮೇಲಲ್ಲ! ತನ್ನ ಸಿದ್ಧಾಂತವನ್ನು ರುಜುವಾತುಪಡಿಸಲು ಬೇಕಾದಷ್ಟು ಪುರಾವೆಗಳನ್ನು ತರದೆ ಸಿದ್ಧಾಂತವೊಂದನ್ನು ಮುಂದಿಡುವುದು ಯಾವುದೇ ವ್ಯಕ್ತಿಗೂ ಭೂಷಣವಲ್ಲ. ಆದ್ದರಿಂದ ನಾನು ಅವರೊಂದಿಗೆ ಹೇಳುತ್ತೇನೆ: "ಕುರ್‌ಆನಿನ ಒಂದು ವಂಚನೆಯನ್ನು ನನಗೆ ತೋರಿಸಿಕೊಡಿ. ಕುರ್‌ಆನ್ ನನ್ನನ್ನು ಎಲ್ಲಿ ಮೋಸಗೊಳಿಸುತ್ತಿದೆ ಎಂಬುದನ್ನು ನನಗೆ ತೋರಿಸಿಕೊಡಿ. ನನಗೆ ತೋರಿಸಿಕೊಡಿ. ಅನ್ಯಥಾ ಅದು ಮೋಸಗೊಳಿಸುವ ಗ್ರಂಥವಾಗಿದೆ ಎಂದು ಹೇಳಬೇಡಿ!"

## ವಿಶ್ವ ಮತ್ತು ಜೀವದ ಮೂಲ

ಕುರ್‌ಆನ್‌ನ ಒಂದು ಆಸಕ್ತಿದಾಯಕ ವೈಶಿಷ್ಟ್ಯವು ಅದು ಗತಕಾಲಕ್ಕೆ ಮಾತ್ರವಲ್ಲದೆ ಆಧುನಿಕ ಕಾಲಕ್ಕೂ ಸಂಬಂಧ ಹೊಂದಿರುವ *ಆಶ್ಚರ್ಯಕರ ವಿದ್ಯಮಾನಗಳೊಂದಿಗೆ* ಹೇಗೆ ವ್ಯವಹರಿಸುತ್ತದೆ ಎಂಬುದಾಗಿದೆ. *ಮೂಲಭೂತವಾಗಿ, ಕುರ್‌ಆನ್ ಒಂದು ಹಳೆಯ ಸಮಸ್ಯೆಯಲ್ಲ. ಅದು ಇಂದೂ ಕೂಡ ಸಮಸ್ಯೆಯಾಗಿಯೇ ಉಳಿದಿದೆ. ಅಂದರೆ ಮುಸ್ಲಿಮೇತರರಿಗೆ*

*ಒಂದು ಸಮಸ್ಯೆಯಾಗಿಯೇ ಉಳಿದಿದೆ.* ಕುರ್‌ಆನ್ ಎಂಬುದು ಜನರು ಸಂತೃಪ್ತಿ ಪಡೆಯಬೇಕಾಗಿರುವ ಒಂದು ಶಕ್ತಿಯಾಗಿದೆ ಮತ್ತು ಅದರ ಸಾಚಾತನದ ಬಗ್ಗೆ ಇನ್ನು ಮುಂದೆ ಸವಾಲು ಹಾಕಬಾರದು ಎಂಬುದಕ್ಕೆ ಪ್ರತಿ ದಿನವೂ, ಪ್ರತಿ ವಾರವೂ, ಪ್ರತಿ ವರ್ಷವೂ ಹೆಚ್ಚು ಹೆಚ್ಚು ಪುರಾವೆಗಳನ್ನು ತರುತ್ತಿವೆ! ಉದಾಹರಣೆಗೆ ಕುರ್‌ಆನ್‌ನ ಒಂದು ಸೂಕ್ತಿ (ಸೂರಃ ಅಲ್‌ಅಂಬಿಯಾ 21:30) ಹೀಗಿದೆ:

﴿ أَوَلَمْ يَرَ الَّذِينَ كَفَرُوا أَنَّ السَّمَاوَاتِ وَالْأَرْضَ كَانَتَا رَتْقًا فَفَتَقْنَاهُمَا وَجَعَلْنَا مِنَ الْمَاءِ كُلَّ شَيْءٍ حَيٍّ أَفَلَا يُؤْمِنُونَ ﴾

**“ಆಕಾಶಗಳು ಮತ್ತು ಭೂಮಿಯು ಪರಸ್ಪರ ಅಂಟಿಕೊಂಡಿದ್ದಾಗಿಯೂ, ತರುವಾಯ ನಾವು ಅವುಗಳನ್ನು ಬೇರ್ಪಡಿಸಿರುವುದಾಗಿಯೂ ಅವಿಶ್ವಾಸಿಗಳು ಕಾಣಲಾರರೇ? ಜೀವವಿರುವ ಪ್ರತಿಯೊಂದು ವಸ್ತುವನ್ನೂ ನಾವು ನೀರಿನಿಂದ ಮಾಡಿರುವೆವು. ಅವರು ವಿಶ್ವಾಸವಿಡಲಾರರೇ?”**

ವಿಪರ್ಯಾಸವೇನೆಂದರೆ, ಈ ಮಾಹಿತಿಯನ್ನು ನೀಡಿದ ಕಾರಣಕ್ಕಾಗಿ ಅವರು 1973ರಲ್ಲಿ ಒಬ್ಬ ಅವಿಶ್ವಾಸಿ ದಂಪತಿಗೆ ನೊಬೆಲ್ ಪಾರಿತೋಷಕವನ್ನು ನೀಡಿ ಗೌರವಿಸಿದರು.

ಒಂದು ತುಣುಕಿನಿಂದ ಈ ವಿಶ್ವವು ಹೇಗೆ ಆರಂಭಗೊಂಡಿತು ಎಂಬ ವಿಶ್ವದ ಮೂಲವನ್ನು ಕುರ್‌ಆನ್ ಅವತೀರ್ಣಗೊಳಿಸಿದೆ. ಆದರೆ ಮಾನವ ಕುಲವು ಈ ಅವತೀರ್ಣವನ್ನು (ಸೂಕ್ತಿಯನ್ನು) ಈಗಲೂ ಪರಿಶೀಲಿಸುತ್ತಲೇ ಮುಂದುವರಿಯುತ್ತಿದೆ. ಇದರ ಜೊತೆಗೆ, **ಜೀವವು ನೀರಿನಿಂದ ಉದ್ಭವವಾಗಿದೆ** ಎಂಬ ಸತ್ಯವನ್ನು ಹದಿನಾಲ್ಕು ಶತಮಾನಗಳ ಹಿಂದಿನ ಜನರಿಗೆ ಮನವರಿಕೆ ಮಾಡಿಕೊಡುವುದು ಅಷ್ಟು ಸುಲಭವಾಗಿರಲಿಲ್ಲ. ಹೌದು! ಹದಿನಾಲ್ಕು ಶತಮಾನಗಳ ಹಿಂದೆ ನೀವು ಮರುಭೂಮಿಯಲ್ಲಿ ನಿಂತು ಅಲ್ಲಿರುವವ ರೊಂದಿಗೆ: “ನೀವು ಕಾಣುತ್ತಿರುವ ಇವೆಲ್ಲವನ್ನೂ (ನೀವು ನಿಮ್ಮ ಶರೀರದೆಡೆಗೆ

ಕೈ ತೋರಿಸುತ್ತಾ) ಹೆಚ್ಚಿನಂಶ ನೀರಿನಿಂದಲೇ ಸೃಷ್ಟಿಸಲಾಗಿದೆ" ಎಂದು ಹೇಳಿದರೆ ಯಾರೂ ನಿಮ್ಮ ಮಾತನ್ನು ನಂಬಲಾರರು. ಸೂಕ್ಷ್ಮದರ್ಶಕವನ್ನು ಕಂಡು ಹಿಡಿಯುವ ತನಕ ಅದಕ್ಕಿರುವ ಪುರಾವೆಯು ಲಭ್ಯವಿರಲಿಲ್ಲ. ಜೀವವಿರುವ ಎಲ್ಲ ವಸ್ತುಗಳನ್ನೂ ನೀರಿನಿಂದಲೇ ಸೃಷ್ಟಿಸಲಾಗಿದೆ ಎಂಬುದನ್ನು ಪರಿಶೀಲಿಸಲು ಅವರಿಗೆ 80% ನೀರನ್ನು ಹೊಂದಿರುವ ಮತ್ತು ಜೀವಕೋಶದ ಮೂಲ ವಸ್ತುವಾಗಿರುವ ಸೈಟೋಪ್ಲಾಸಂ (cytoplasm)ನ್ನು ಕಂಡುಹಿಡಿಯುವ ತನಕ ಕಾಯಬೇಕಾಯಿತು. ಅದೇನೇ ಆದರೂ, ಕುರ್‌ಆನಿನಲ್ಲಿ ಈ ಮಾಹಿತಿಯು ಬಹಳ ಹಿಂದೆಯೇ ಅವತೀರ್ಣಗೊಂಡಿತ್ತು. ಕುರ್‌ಆನ್ ಮತ್ತೊಮ್ಮೆ ಕಾಲದ ಪರೀಕ್ಷೆಯಲ್ಲಿ ಜಯಗಳಿಸಿತು.

## ಸುಳ್ಳಾಗಿಸುವ ಪರೀಕ್ಷೆಯ ಬಗ್ಗೆ ಇನ್ನಷ್ಟು

ಈಗಾಗಲೇ ಪ್ರಸ್ತಾಪಿಸಲಾಗಿರುವ ಸುಳ್ಳಾಗಿಸುವ ಪರೀಕ್ಷೆ (falsification test)ಗಳಿಗೆ ಸಂಬಂಧಿಸಿದಂತೆ, ಅವು *ಗತ ಮತ್ತು ವರ್ತಮಾನ ಕಾಲಗಳಿಗೆ* ಅನ್ವಯಿಸುತ್ತವೆ ಎಂಬುದು ಒಂದು ಕುತೂಹಲಕಾರಿ ಸಂಗತಿಯಾಗಿದೆ. ಅವುಗಳ ಪೈಕಿ ಕೆಲವು ಅಲ್ಲಾಹುವಿನ ಸರ್ವಶಕ್ತತೆಯನ್ನು ಮತ್ತು ಸಮಗ್ರ ಜ್ಞಾನವನ್ನು ಬಿಂಬಿಸಿದರೆ, ಇತರ ಕೆಲವು ಇಂದಿನ ದಿನದ ತನಕವೂ ಸವಾಲುಗಳಾಗಿಯೇ ನಿಂತಿವೆ. ಅಲ್ಲಾಹನ ಸರ್ವಶಕ್ತತೆ ಮತ್ತು ಸಮಗ್ರ ಜ್ಞಾನವನ್ನು ಬಿಂಬಿಸುವುದಕ್ಕಿರುವ ಒಂದು ಉದಾಹರಣೆಯು ಕುರ್‌ಆನಿನಲ್ಲಿ ಅಬೂ ಲಹಬರ ಬಗ್ಗೆ ಮಾಡಲಾಗಿರುವ ಪ್ರಸ್ತಾಪವಾಗಿದೆ. ಅಗೋಚರ ವಿಷಯಗಳನ್ನು ಅರಿತಿರುವ ಅಲ್ಲಾಹು, ಅಬೂ ಲಹಬ್ ಎಂದೂ ತನ್ನ ಮಾರ್ಗವನ್ನು ತೊರೆದು ಇಸ್ಲಾಮ್ ಸ್ವೀಕರಿಸಲಾರರು ಎಂಬುದನ್ನು ಮುಂಗಡವಾಗಿಯೇ ಅರಿತಿದ್ದನು.

ಆದ್ದರಿಂದ ಅಬೂಲಹಬ್ ನಾಶವಾಗುವನು ಮತ್ತು ಶಾಶ್ವತವಾಗಿ ನರಕವಾಸಿಯಾಗುವನು ಎಂದು ಅಲ್ಲಾಹು ಸ್ಪಷ್ಟವಾಗಿಯೇ ಹೇಳಿದನು. ಇದು ಮತ್ತು ಇದರಂತಿರುವ ಅಧ್ಯಾಯವು ಅಲ್ಲಾಹುವಿನ ದೈವಿಕ ಯುಕ್ತಿಯನ್ನು ತಿಳಿಸಿಕೊಡುವುದರ ಜೊತೆಗೆ ಅಬೂ ಲಹಬನಂತಹವರಿಗೆ ಒಂದು ಎಚ್ಚರಿಕೆಯ ಸಂದೇಶವನ್ನೂ ರವಾನಿಸುತ್ತದೆ.

## ಗ್ರಂಥದವರು

ಮೇಲೆ ಹೇಳಲಾದ ಸುಳ್ಳಾಗಿಸುವ ಇನ್ನೊಂದು ಪರೀಕ್ಷೆಗಿರುವ ಉದಾಹರಣೆಯು **ಮುಸ್ಲಿಮರ ಮತ್ತು ಯಹೂದಿಗಳ ಮಧ್ಯೆಯಿರುವ ಸಂಬಂಧವನ್ನು** ಪ್ರಸ್ತಾಪಿಸುವ ಕುರ್‌ಆನ್‌ನಲ್ಲಿರುವ ಒಂದು ಸೂಕ್ತಿಯಾಗಿದೆ. ಈ ಸೂಕ್ತಿಯಲ್ಲಿ ಪ್ರಸ್ತಾಪಿಸಿರುವ ವಿಷಯವು ಯಾವುದೋ ಒಬ್ಬ ಮುಸ್ಲಿಮನಿಗೆ ಮತ್ತು ಯಾವುದೋ ಒಬ್ಬ ಯಹೂದಿಗೆ ಸೇರಿದ ವೈಯುಕ್ತಿಕ ವಿಷಯವಲ್ಲ. ಬದಲಾಗಿ ಅದು ಮುಸ್ಲಿಮ್ ಮತ್ತು ಯಹೂದಿಯೆಂಬ ಎರಡು ಸಮುದಾಯಗಳ ಜನರ ನಡುವೆಯಿರುವ ಸಂಬಂಧದ ಕುರಿತಾಗಿದೆ. ಮೂಲಭೂತವಾಗಿ, ಕುರ್‌ಆನ್ ತಿಳಿಸುವುದೇನೆಂದರೆ ಯಹೂದಿಗಳು ಮುಸ್ಲಿಮರೊಂದಿಗೆ ವರ್ತಿಸುವುದಕ್ಕಿಂತಲೂ ಚೆನ್ನಾಗಿ ಕ್ರೈಸ್ತರು ಎಲ್ಲ ಕಾಲಗಳಲ್ಲೂ ಮುಸ್ಲಿಮರೊಂದಿಗೆ ವರ್ತಿಸುವರು ಎಂದಾಗಿದೆ. ಈ ಸೂಕ್ತಿಯ ಪೂರ್ಣ ಪ್ರಭಾವವನ್ನು ಗ್ರಹಿಸಲು ಸಾಧ್ಯವಾಗುವುದು ಆ ಸೂಕ್ತಿಯ ನಿಜವಾದ ಅರ್ಥವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದ ಬಳಿಕವಾಗಿದೆ. ಅನೇಕ ಮಂದಿ ಕ್ರೈಸ್ತರು ಮತ್ತು ಅನೇಕ ಮಂದಿ ಯಹೂದಿಗಳು ಮುಸ್ಲಿಮರಾಗಿ ಪರಿವರ್ತನೆ ಹೊಂದಿರುವರು ಎಂಬುದು ನಿಜ. ಆದರೆ ಮೊತ್ತವಾಗಿ ನೋಡುವಾಗ ಯಹೂದ ಸಮುದಾಯವನ್ನು ಮುಸ್ಲಿಮರ ಕಠಿಣ ಶತ್ರುವಾಗಿ ವೀಕ್ಷಿಸಲಾಗುತ್ತದೆ. ಕುರ್‌ಆನ್ ಆಹ್ವಾನಿಸುವ ಇಂತಹ ಒಂದು

ಬಹಿರಂಗ ಘೋಷಣೆಯನ್ನು ಅರ್ಥ ಮಾಡಿಕೊಳ್ಳುವವರು ಬಹಳ ಕಮ್ಮಿ. ಆದರೆ ವಾಸ್ತವವಾಗಿ ಕುರ್‌ಆನನ್ನು ಸುಳ್ಳಾಗಿಸಲು ಅಂದರೆ ಅದೊಂದು ದೈವಿಕ ಅವತೀರ್ಣವಲ್ಲವೆಂದು ನಿರೂಪಿಸಲು ಇದು ಯಹೂದಿಗಳಿಗೆ ಸುವರ್ಣಾವಕಾಶವನ್ನು ಒದಗಿಸುತ್ತದೆ. ಅವರು ಮಾಡಬೇಕಾಗಿರುವುದೇನೆಂದರೆ ಯಹೂದ ಸಮುದಾಯದವರೆಲ್ಲರೂ ಒಟ್ಟಾಗಿ ಕೆಲವು ವರ್ಷಗಳ ತನಕವಾದರೂ ಮುಸ್ಲಿಮರೊಂದಿಗೆ ಚೆನ್ನಾಗಿ ವರ್ತಿಸಿ, ನಂತರ “ಈಗ ಜಗತ್ತಿನಲ್ಲಿ ನಿಮ್ಮ ಮಿತ್ರರು ಯಾರು ಎಂಬುದರ ಬಗ್ಗೆ ನಿಮ್ಮ ಪವಿತ್ರ ಗ್ರಂಥವು ಏನೆನ್ನುತ್ತದೆ? ಅದು ಯಹೂದಿಗಳೋ? ಅಥವಾ ಕ್ರೈಸ್ತರೋ? ನೋಡಿ! ನಾವು ಯಹೂದಿಗಳು ನಿಮಗೋಸ್ಕರ ಏನೆಲ್ಲ ಮಾಡಿದ್ದೇವೆಂದು ನೋಡಿ” ಎಂದು ಹೇಳುವುದು ಮಾತ್ರವಾಗಿದೆ.

ಕುರ್‌ಆನಿನ ದೈವಿಕತೆಯನ್ನು ಅಲ್ಲಗಳೆಯಲು ಅವರು ಮಾಡಬೇಕಾದುದು ಇಷ್ಟು ಮಾತ್ರವಾಗಿದೆ. ಆದರೆ ಕಳೆದ 1400 ವರ್ಷಗಳಲ್ಲಿ ಅವರಿಗೆ ಇದನ್ನು ಮಾಡಲು ಸಾಧ್ಯವಾಗಲಿಲ್ಲ. ಈ ಅವಕಾಶವು ಎಂದಿನಂತೆಯೇ ಈಗಲೂ ಅಸ್ತಿತ್ವದಲ್ಲಿದೆ.

## ಒಂದು ಗಣಿತಶಾಸ್ತ್ರೀಯ ಸಮೀಪನೆ

ಒಬ್ಬ ವ್ಯಕ್ತಿ ಕುರ್‌ಆನನ್ನು ಯಾವೆಲ್ಲ ಕೋನಗಳ ಮೂಲಕ ಸಮೀಪಿಸಲು ಸಾಧ್ಯವೋ ಅವೆಲ್ಲವುಗಳ ಬಗ್ಗೆ, ಈ ತನಕ ನೀಡಿದ ಉದಾಹರಣೆಗಳೆಲ್ಲವೂ ನಿಸ್ಸಂದೇಹವಾಗಿಯೂ **ವ್ಯಕ್ತಿನಿಷ್ಠ** (subjective) ಉದಾಹರಣೆಗಾಗಿದ್ದವು. ಇವುಗಳ ಪೈಕಿ ಇನ್ನೊಂದು ಕೋನವಿದೆ. ಆ ಕೋನವು **ವಸ್ತುನಿಷ್ಠ** (objective)ವಾಗಿದೆ ಮತ್ತು ಅದರ ಬುನಾದಿಯು ಸಂಪೂರ್ಣವಾಗಿ *ಗಣಿತಶಾಸ್ತ್ರದ* ಮೇಲಿದೆ.

ಉತ್ತಮ ಊಹೆಗಳ ಪಟ್ಟಿ ಎಂದು ಹೇಳಬಹುದಾದ ಒಂದನ್ನು ಜೋಡಿಸ ತೊಡಗುವಾಗ ಕುರ್‌ಆನ್ ಎಷ್ಟೊಂದು ಅಧಿಕೃತವಾಗಿ ಕಂಡುಬರುತ್ತದೋ ಅದು ನಿಜಕ್ಕೂ ಆಶ್ಚರ್ಯಕರವಾಗಿದೆ. ಗಣಿತ ಶಾಸ್ತ್ರದಲ್ಲಿ ಇದನ್ನು ಊಹೆ ಮತ್ತು ಭವಿಷ್ಯ ನುಡಿ (guessing and prediction) ಗಳ ಉದಾಹರಣೆಯ ಮೂಲಕ ವಿವರಿಸಬಹುದಾಗಿದೆ. ಉದಾಹರಣೆಗೆ: ಒಬ್ಬ ವ್ಯಕ್ತಿಗೆ ಎರಡು ಆಯ್ಕೆಗಳಿದ್ದು (ಅವುಗಳಲ್ಲಿ ಒಂದು ಸರಿ ಹಾಗೂ ಮತ್ತೊಂದು ತಪ್ಪಾಗಿದ್ದು), ಆ ವ್ಯಕ್ತಿ ಕಣ್ಣು ಮುಚ್ಚಿ ಒಂದನ್ನು ಆರಿಸುತ್ತಾನೆ ಎಂದಾದರೆ, ಅದರ ಅರ್ಧಭಾಗದಲ್ಲಿ (ಎರಡನೆ ಒಂದರಲ್ಲಿ) ಸರಿಯಾಗಿರುತ್ತಾನೆ. ಮೂಲಭೂತ ವಾಗಿ, ಅವನಿಗೆ ಎರಡನೇ ಒಂದು (1/2) ಆಯ್ಕೆಗಳಿದ್ದು ಆತ ಒಂದೋ ಸರಿಯಾಗಿರುವ ಆಯ್ಕೆಯನ್ನು ಅಥವಾ ತಪ್ಪಾಗಿರುವ ಆಯ್ಕೆಯನ್ನು ಆರಿಸಬಹುದು.

ಈಗ ಅದೇ ವ್ಯಕ್ತಿ ಎರಡು ಪರಿಸ್ಥಿತಿಗಳನ್ನು (situation) ಹೊಂದಿದ್ದು (ಅಂದರೆ ಒಂದು ಪರಿಸ್ಥಿತಿಯಲ್ಲಿ ಅವನು ಸರಿಯಾಗಲೂಬಹುದು ಅಥವಾ ತಪ್ಪೆಸಗಲೂಬಹುದು. ಹಾಗೆಯೇ ಇನ್ನೊಂದು ಪರಿಸ್ಥಿತಿಯಲ್ಲೂ ಅವನು ಸರಿಯಾಗಲೂ ಬಹುದು ಅಥವಾ ತಪ್ಪೆಸಗಲೂ ಬಹುದು) ಅವನು ಕಣ್ಣು ಮುಚ್ಚಿ ಆರಿಸುವುದಾದರೆ ಅವನು ನಾಲ್ಕನೆ ಒಂದು (1/4) ಆಯ್ಕೆಯಲ್ಲಿ ಮಾತ್ರ (ಅಂದರೆ ನಾಲ್ಕು ಆಯ್ಕೆಗಳ ಪೈಕಿ ಒಂದರಲ್ಲಿ ಮಾತ್ರ) ಸರಿಯಾಗುವ ಸಾಧ್ಯತೆಯಿರುತ್ತದೆ. ನಾಲ್ಕು ಆಯ್ಕೆಗಳಲ್ಲಿ ಅವನಿಗೆ ಸರಿಯಾಗುವ ಅವಕಾಶವಿರುವುದು ಒಂದರಲ್ಲಿ ಮಾತ್ರ. ಯಾಕೆಂದರೆ ಇತರ ಮೂರು ಆಯ್ಕೆಗಳೂ ತಪ್ಪೆಸಗುವ ಆಯ್ಕೆಗಳಾಗಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅವನು ಒಂದನೇ ಪರಿಸ್ಥಿತಿಯಲ್ಲಿ ತಪ್ಪು ಆಯ್ಕೆ ಮಾಡಿ ಎರಡನೇ ಪರಿಸ್ಥಿತಿಯಲ್ಲೂ ತಪ್ಪು ಆಯ್ಕೆ ಮಾಡಬಹುದು. ಅಥವಾ ಅವನು ಒಂದನೇ ಪರಿಸ್ಥಿತಿಯಲ್ಲಿ ತಪ್ಪು ಆಯ್ಕೆ ಮಾಡಿ ಎರಡನೇ ಪರಿಸ್ಥಿತಿಯಲ್ಲಿ ಸರಿ ಆಯ್ಕೆ ಮಾಡಬಹುದು. ಅಥವಾ ಅವನು ಒಂದನೇ ಪರಿಸ್ಥಿತಿಯಲ್ಲಿ ಸರಿ ಆಯ್ಕೆ ಮಾಡಿ ಎರಡನೇ ಪರಿಸ್ಥಿತಿಯಲ್ಲಿ ತಪ್ಪು ಆಯ್ಕೆ ಮಾಡಬಹುದು. ಅಥವಾ

ಅವನು ಒಂದನೇ ಪರಿಸ್ಥಿತಿಯಲ್ಲಿ ಸರಿ ಆಯ್ಕೆ ಮಾಡಿ ಎರಡನೇ ಪರಿಸ್ಥಿತಿಯಲ್ಲೂ ಸರಿ ಆಯ್ಕೆ ಮಾಡಬಹುದು.

ಅವನು ಎರಡು ಪರಿಸ್ಥಿತಿಗಳಲ್ಲೂ ಸರಿ ಆಯ್ಕೆ ಮಾಡುವ ನಾಲ್ಕನೆ ಹಂತದಲ್ಲಿ ಮಾತ್ರ ಅವನಿಗೆ ಸರಿಯಾಗುವ ಅವಕಾಶವಿರುತ್ತದೆ. ಉಳಿದ ಮೂರು ಹಂತಗಳಲ್ಲೂ ಅವನಿಗಿರುವುದು ತಪ್ಪೆಸಗುವ ಅವಕಾಶಗಳು ಮಾತ್ರವಾಗಿವೆ. ಅಂದರೆ ಪರಿಸ್ಥಿತಿಗಳು ಹೆಚ್ಚಾದಂತೆ ಸರಿಯಾಗುವ ಅವಕಾಶಗಳು ಕಡಿಮೆಯಾಗುತ್ತವೆ. ಇದಕ್ಕಿರುವ ಗಣಿತ ಸಮೀಕರಣವು ಹೀಗಿದೆ: ½ x ½. [ಅಂದರೆ ಮೊದಲನೆ ಪರಿಸ್ಥಿತಿಯಲ್ಲಿರುವ ಎರಡನೆ ಒಂದು (1/2) ಅವಕಾಶವನ್ನು ಎರಡನೆ ಪರಿಸ್ಥಿತಿಯಲ್ಲಿರುವ ಎರಡನೆ ಒಂದು (1/2) ಅವಕಾಶದಿಂದ ಗುಣಿಸುವುದು].

ಈಗ ಇದೇ ಉದಾಹರಣೆಯನ್ನು ಮುಂದುವರಿಸಿ ಆ ವ್ಯಕ್ತಿಯ ಮುಂದೆ ಮೂರು ಪರಿಸ್ಥಿತಿಗಳನ್ನು ಇಡುವುದಾದರೆ ಎಲ್ಲ ಮೂರು ಪರಿಸ್ಥಿತಿಗಳಲ್ಲೂ ಸರಿಯಾಗುವ ಅವಕಾಶವು ಅವನಿಗಿರುವುದು ಎಂಟನೇ ಒಂದರಲ್ಲಿ ಮಾತ್ರವಾಗಿದೆ. ಅಂದರೆ ½ x ½ x ½. ಹೀಗೆ ಪರಿಸ್ಥಿತಿಗಳು ಹೆಚ್ಚಾಗುತ್ತಾ ಸಾಗಿದಂತೆ ಎಲ್ಲದರಲ್ಲಿಯೂ ಸರಿಯಾಗುವ ಅವಕಾಶವು ಕ್ಷೀಣವಾಗುತ್ತಾ ಸಾಗುತ್ತದೆ.

ಈಗ ಈ ಸಿದ್ಧಾಂತವನ್ನು ಕುರ್‌ಆನಿಗೆ ಹಚ್ಚಿ ನೋಡಿದರೆ, ಅಂದರೆ ಕುರ್‌ಆನಿನ ಆಯ್ಕೆಯು ಸರಿಯಾಗಿದೆ ಎಂದು ದೃಢಪಟ್ಟಿರುವ ಎಲ್ಲವನ್ನೂ ಪಟ್ಟಿ ಮಾಡಿ ಅದಕ್ಕೆ ಈ ಸಿದ್ಧಾಂತವನ್ನು ಹಚ್ಚಿದರೆ ಅವೆಲ್ಲವೂ ಕೇವಲ ಅಂಧ ಊಹೆಗಳ ಮೇರೆಗೆ ನಿರೂಪಿಸಲಾಗಿದೆ ಎಂದು ಹೇಳುವುದು ಅಸಂಭವ್ಯವಾಗಿದೆ. ವಾಸ್ತವವಾಗಿ, ಕುರ್‌ಆನ್‌ನಲ್ಲಿ ಅನೇಕ ವಿಷಯಗಳ ಬಗ್ಗೆ ಮಾತನಾಡಲಾಗಿದೆ. ಆದ್ದರಿಂದ ಅದೃಷ್ಟಶಾಲಿ ಊಹೆಗಳನ್ನು ಮಾಡುವ ಅವಕಾಶವು ಕಡಿಮೆಯಾಗುತ್ತಾ ಶೂನ್ಯಕ್ಕೆ ಸಾಗುತ್ತದೆ. ಕುರ್‌ಆನ್ ಸುಳ್ಳಾಗಲು ಲಕ್ಷಾಂತರ

ದಾರಿಗಳಿದ್ದರೂ ಸಹ ಎಲ್ಲ ಸಂದರ್ಭಗಳಲ್ಲೂ ಅದು ಸರಿಯಾಗಿರುತ್ತದೆ. ಇದರಿಂದ ತಿಳಿದು ಬರುವ ಪ್ರಕಾರ ಅದು ಕೇವಲ ಊಹೆಗಳಲ್ಲ ಎಂಬುದು ಮನದಟ್ಟಾಗುತ್ತದೆ.

ಕುರ್‌ಆನ್ ಸರಿಯಾದ ಹೇಳಿಕೆಯನ್ನು ನೀಡಿದ ಈ ಕೆಳಗಿನ ಮೂರು ಉದಾಹರಣೆಗಳು ಕುರ್‌ಆನ್ ಈ ಸವಾಲನ್ನು ಹೇಗೆ ಜಯಿಸುತ್ತದೆ ಎಂಬುದನ್ನು ಮೊತ್ತವಾಗಿ ಬಿಂಬಿಸುತ್ತವೆ.

## ಹೆಣ್ಣು ಜೇನು ನೊಣ

ಕುರ್‌ಆನ್ ತನ್ನ 16ನೇ ಅಧ್ಯಾಯದಲ್ಲಿ (ಸೂರ ಅನ್ನಹ್ಲ್ 16:68–69) ಹೆಣ್ಣು ಜೇನು ನೊಣವು ಆಹಾರ ಶೇಖರಣೆಗಾಗಿ ಗೂಡಿನಿಂದ ಹೊರ ಹೋಗುವುದರ ಬಗ್ಗೆ ಪ್ರಸ್ತಾಪಿಸಿದೆ. ಈಗ, ಒಬ್ಬ ವ್ಯಕ್ತಿ ಊಹಿಸುತ್ತಾ ಹೇಳಬಹುದು: “ನಮ್ಮ ಸುತ್ತಲೂ ಹಾರಾಡುತ್ತಿರುವ ಆ ನೊಣವು ಗಂಡಾಗಿರಬಹುದು ಅಥವಾ ಹೆಣ್ಣಾಗಿರಬಹುದು. ಅದು ಹೆಣ್ಣಾಗಿರಬಹುದೆಂದು ನಾನು ಊಹಿಸುತ್ತೇನೆ.” ಈಗ ಅವನಿಗೆ ಸರಿಯಾಗಿರಲು ಎರಡರಲ್ಲಿ ಒಂದು ಅವಕಾಶ ಮಾತ್ರವಿದೆ.

ಇಲ್ಲಿ ಕುರ್‌ಆನ್ ಅದನ್ನು ಹೆಣ್ಣೆಂದು ಸರಿಯಾಗಿ ಹೇಳಿದೆ. ಆದರೆ ಕುರ್‌ಆನಿನ ಅವತೀರ್ಣ ಕಾಲದಲ್ಲಿ ಹೆಚ್ಚಿನ ಜನರು ಹಾಗೆ ಭಾವಿಸಿರಲಿಲ್ಲ. ಗಂಡು ಜೇನು ನೊಣ ಮತ್ತು ಹೆಣ್ಣು ಜೇನು ನೊಣದ ಮಧ್ಯೆಯಿರುವ ವ್ಯತ್ಯಾಸವನ್ನು ಹೇಳಲು ನಿಮಗೆ ಸಾಧ್ಯವೇ? ಇದರ ಬಗ್ಗೆ ಹೇಳಲು ತಜ್ಞರು ಬೇಕಾಗಿದ್ದಾರೆ. ಆದರೆ ಆಹಾರ ಸಂಗ್ರಹಕ್ಕಾಗಿ ಗಂಡು ಜೇನು ನೊಣ ಗೂಡಿನಿಂದ ಹೊರಬರುವುದೇ ಇಲ್ಲ ಎಂಬುದನ್ನು ಕಂಡುಹಿಡಿಯಲಾಗಿದೆ. ಆದರೂ *Henry the Fourth*

ಎಂಬ ಶೇಕ್ಸ್‌ಪಿಯರ್‌ನ ನಾಟಕದಲ್ಲಿ ಕೆಲವು ಪಾತ್ರಗಳು ಜೇನು ನೊಣದ ಬಗ್ಗೆ ಮಾತನಾಡುತ್ತವೆ. ಜೇನು ನೊಣಗಳು ಸೈನಿಕರಾಗಿದ್ದು ಅವುಗಳಿಗೆ ಒಬ್ಬ ರಾಜನಿರುತ್ತಾನೆ ಎಂದು ಅದು ಹೇಳುತ್ತದೆ. ಶೇಕ್ಸ್‌ಪಿಯರ್‌ನ ಕಾಲಘಟ್ಟದ ಜನರ ಯೋಚನೆಯು ಹೀಗೆಯೇ ಇತ್ತು. ಅಂದರೆ ನಾವು ನಮ್ಮ ಸುತ್ತಮುತ್ತಲು ಕಾಣುವ ಜೇನು ನೊಣಗಳು ಗಂಡಾಗಿವೆ ಮತ್ತು ಅವು ಗೂಡಿಗೆ ಹೋಗಿ ರಾಜನಿಗೆ ಮಾಹಿತಿಯನ್ನು ಒದಗಿಸುತ್ತವೆ ಎಂದು ಅವರು ಭಾವಿಸಿದ್ದರು. ಆದರೆ ವಾಸ್ತವವಾಗಿ ಇದು ಸತ್ಯವೇ ಅಲ್ಲ. ಸತ್ಯವೇನೆಂದರೆ, ಈ ಜೇನು ನೊಣಗಳು ಹೆಣ್ಣಾಗಿದ್ದು ಅವು ರಾಣಿಗೆ ಮಾಹಿತಿಯನ್ನು ನೀಡುತ್ತವೆ. ಆಧುನಿಕ ವೈಜ್ಞಾನಿಕ ಸಂಶೋಧನೆಗಳು ಈ ವಾಸ್ತವಿಕತೆಯನ್ನು ಕಂಡುಹಿಡಿದಿದ್ದು ಕಳೆದ 300 ವರ್ಷಗಳಿಂದಾಗಿತ್ತು.

ಈಗ ನಮ್ಮ ಊಹೆಯ ಪಟ್ಟಿಯತ್ತ ಮರಳೋಣ. ಕುರ್‌ಆನಿಗೆ ಈ ವಿಷಯದಲ್ಲಿ ಸರಿಯಾಗುವ ಅವಕಾಶವು ಎರಡರಲ್ಲಿ ಒಂದು ಮಾತ್ರವಾಗಿತ್ತು.

## ಸೂರ್ಯ

ಜೇನುನೊಣದ ವಿಷಯದಂತೆಯೇ ಕುರ್‌ಆನ್ ಸೂರ್ಯನ ಬಗ್ಗೆ ಮತ್ತು ಅದು ಆಕಾಶದಲ್ಲಿ ಚಲಿಸುವ ವಿಧಾನದ ಬಗ್ಗೆ ಮಾತನಾಡುತ್ತದೆ. ಪುನಃ, ಒಬ್ಬ ವ್ಯಕ್ತಿ ಇದರ ಬಗ್ಗೆ ಊಹಿಸಬಹುದು. ಸೂರ್ಯನ ಚಲನೆಯ ಬಗ್ಗೆ ನಮಗೆ ಎರಡು ಆಯ್ಕೆಗಳಿವೆ. ನಾವು ಒಂದು ಕಲ್ಲನ್ನು ಎಸೆದಾಗ ಅದು ಹೇಗೆ ಚಲಿಸುತ್ತದೋ ಹಾಗೆಯೇ ಸೂರ್ಯನೂ ಚಲಿಸುತ್ತಾನೆ ಅಥವಾ ಸೂರ್ಯನು ಸ್ವಯಂ ಪ್ರೇರಣೆಯಿಂದ ಚಲಿಸುತ್ತಿದ್ದಾನೆ ಎನ್ನುವ ಎರಡು ಆಯ್ಕೆಗಳಿವೆ. ಕುರ್‌ಆನ್ ಎರಡನೆಯ ಆಯ್ಕೆಯನ್ನು ಸೂಚಿಸುತ್ತದೆ. ಅಂದರೆ ಸೂರ್ಯನು ತನ್ನ

ಚಲನೆಯಿಂದಾಗಿ ಚಲಿಸುತ್ತಿದ್ದಾನೆ ಎನ್ನುತ್ತದೆ. (ಕುರ್‌ಆನ್ 21/33) ಸೂರ್ಯನು ತನ್ನ ಚಲನೆಯಿಂದಾಗಿ ಚಲಿಸುತ್ತಿದ್ದಾನೆ ಎಂಬುದನ್ನು ಸೂಚಿಸಲು ಕುರ್‌ಆನ್ 'ಸಬಹ' ಎಂಬ ಪದವನ್ನು ಬಳಸಿದೆ. ಈ ಅರಬಿ ಕ್ರಿಯಾಪದದ ಬಳಕೆಯನ್ನು ಪೂರ್ಣವಾಗಿ ಗ್ರಹಿಸಲು ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ.

ಒಬ್ಬ ವ್ಯಕ್ತಿ ನೀರಿನಲ್ಲಿರುವಾಗ, ಅವನ ಚಲನೆಯ ಬಗ್ಗೆ 'ಸಬಹ' ಎಂಬ ಕ್ರಿಯಾಪದವನ್ನು ಬಳಸುವುದಾದರೆ ಅದರರ್ಥ ಅವನು ಈಜುತ್ತಿದ್ದಾನೆ ಎಂದಾಗಿದೆ. ಅಂದರೆ ಅವನು ಸ್ವಯಂ ಪ್ರೇರಣೆಯಿಂದ ಚಲಿಸುತ್ತಿದ್ದಾನೆ. ಅವನು ಚಲಿಸುವುದು ಬಾಹ್ಯವಾದ ಯಾವುದೇ ಬಲವನ್ನೂ ಅವನ ಮೇಲೆ ಪ್ರಯೋಗಿಸುವ ಮೂಲಕವಲ್ಲ. ಹೀಗೆಯೇ ಈ ಪದವನ್ನು ಆಕಾಶದಲ್ಲಿ ಚಲಿಸುವ ಸೂರ್ಯನಿಗೂ ಬಳಸಲಾಗಿದೆ. ಇದರರ್ಥ ಸೂರ್ಯನು ಆಕಾಶದಲ್ಲಿ ಅನಿಯಂತ್ರಿತವಾಗಿ ಚಲಿಸುತ್ತಿದ್ದಾನೆ ಎಂದಲ್ಲ. ಬದಲಾಗಿ ಸೂರ್ಯನು ಚಲಿಸುತ್ತಿರುವಾಗ ಸ್ವತಃ ತಿರುಗುತ್ತಲೂ ಇದ್ದಾನೆ ಎಂಬುದನ್ನು ಇದು ಸೂಚಿಸುತ್ತದೆ. ಈಗ, ಕುರ್‌ಆನ್ ದೃಢೀಕರಿಸಿದ ಈ ವಿಷಯವನ್ನು ಸಂಶೋಧಿಸುವುದು ಅಷ್ಟು ಸುಲಭವಾಗಿತ್ತೇ? ಸೂರ್ಯನು ತಿರುಗುತ್ತಿದ್ದಾನೆಂದು ಒಬ್ಬ ಸಾಮಾನ್ಯ ಮನುಷ್ಯನಿಗೆ ಹೇಳಲು ಸಾಧ್ಯವೇ? ಆಧುನಿಕ ಕಾಲದಲ್ಲಿ ಒಂದು ವಿಶೇಷ ಉಪಕರಣದ ಮೂಲಕ ಸೂರ್ಯನ ಬಿಂಬವನ್ನು ಒಂದು ಮೇಜಿನ ಮೇಲೆ ಬಿಂಬಿಸಲಾಯಿತು. ಈ ಬಿಂಬವನ್ನು ಕಣ್ಣು ಕುರುಡಾಗದ ರೀತಿಯಲ್ಲಿ ನೋಡಲು ಸಾಧ್ಯ. ಈ ವಿಧಾನದ ಮೂಲಕ ಸೂರ್ಯನಲ್ಲಿ ಕಲೆಗಳಿವೆ ಎಂದು ಮಾತ್ರವಲ್ಲ, ಈ ಕಲೆಗಳು ಪ್ರತಿ 25 ದಿನಗಳಿಗೊಮ್ಮೆ ಚಲಿಸುತ್ತಿವೆ ಎಂಬುದನ್ನೂ ಕಂಡುಹಿಡಿಯಲಾಯಿತು. ಈ ಚಲನೆಯನ್ನು ಸೂರ್ಯನು ತನ್ನ ಅಕ್ಷದ ಸುತ್ತ ಮಾಡುವ ಪರಿಭ್ರಮಣವೆಂದು ಗುರುತಿಸಲಾಯಿತು. ತನ್ಮೂಲಕ, ಸೂರ್ಯನು ಚಲಿಸುತ್ತಿರುವಾಗ ತನ್ನ ಅಕ್ಷದ ಸುತ್ತಲೂ ಪರಿಭ್ರಮಿಸುತ್ತಿದ್ದಾನೆಂದು ಕುರ್‌ಆನ್ 1400 ವರ್ಷಗಳ ಹಿಂದೆ ಹೇಳಿದ್ದನ್ನು ದೃಢೀಕರಿಸಲಾಯಿತು.

ಈಗ ಈ ಎರಡು ವಿಷಯಗಳಲ್ಲಿ ಅಂದರೆ ಜೇನು ನೊಣದ ಲಿಂಗ ಮತ್ತು ಸೂರ್ಯನ ಚಲನೆಯ ವಿಷಯದಲ್ಲಿ ಒಬ್ಬನಿಗೆ ಊಹಿಸಲು ಸಿಗುವ ಅವಕಾಶ ನಾಲ್ಕರಲ್ಲಿ ಒಂದಾಗಿದೆ.

## ಕಾಲವಲಯಗಳು

ಹದಿನಾಲ್ಕು ಶತಮಾನಗಳ ಹಿಂದಿನ ಜನರಿಗೆ *ಕಾಲವಲಯಗಳ* (time zones) ಬಗ್ಗೆ ಏನೂ ತಿಳಿದಿರಲಿಕ್ಕಿಲ್ಲ. ಕಾಲವಲಯಗಳ ಬಗ್ಗೆಯಿರುವ ಕುರ್‌ಆನಿನ ನಿರೂಪಣೆಯು ಅದ್ಭುತವಾಗಿದೆ. ಒಂದು ಕುಟುಂಬವು ಸೂರ್ಯ ಉದಯವಾಗುತ್ತಿರುವ ಸಂದರ್ಭ ಬೆಳಗ್ಗಿನ ಆಹಾರ ಸವಿಯುವಾಗ ಇನ್ನೊಂದು ಕುಟುಂಬವು ರಾತ್ರಿ ಮಲಗಲು ತಯಾರಿ ನಡೆಸುತ್ತಿದೆ ಎಂಬ ಪರಿಕಲ್ಪನೆಯು ಈ ಕಾಲದಲ್ಲೂ ಕೂಡ ಆಶ್ಚರ್ಯವನ್ನು ತರುತ್ತದೆ. ನಿಜ, ಹದಿನಾಲ್ಕು ಶತಮಾನಗಳ ಹಿಂದೆ ಒಬ್ಬ ವ್ಯಕ್ತಿ ದಿನವೊಂದರಲ್ಲಿ ಹೆಚ್ಚೆಂದರೆ 30 ಮೈಲಿ ಮಾತ್ರ ಪ್ರಯಾಣ ಮಾಡಬಹುದಿತ್ತು. ಆದ್ದರಿಂದ ಉದಾಹರಣೆಗೆ, ಒಬ್ಬ ವ್ಯಕ್ತಿ ಭಾರತದಿಂದ ಮೊರೊಕ್ಕೊ ತಲುಪಲು ತಿಂಗಳುಗಳು ಹಿಡಿಯುತ್ತಿದ್ದವು. ಅಂತಹ ವ್ಯಕ್ತಿ ಮೊರೊಕ್ಕೊ ತಲುಪಿ ರಾತ್ರಿಯೂಟ ಸವಿಯುವಾಗ ಭಾರತದಲ್ಲಿರುವ ತನ್ನ ಕುಟುಂಬ ಕೂಡ ಈಗ ರಾತ್ರಿಯೂಟ ಸವಿಯುತ್ತಿರಬಹುದು ಎಂದೇ ಭಾವಿಸುತ್ತಿದ್ದನು. ಇದೇಕೆಂದರೆ ತನ್ನ ಪ್ರಯಾಣದ ಮೂಲಕ ತಾನು ಕಾಲವಲಯವನ್ನು ಹಾದು ಬಂದಿರುವೆನು ಎಂಬ ಪ್ರಜ್ಞೆಯು ಅವನಿಗಿರಲಿಲ್ಲ. ಆದರೆ, ಕುರ್‌ಆನ್ ಸರ್ವಜ್ಞನಾದ ಅಲ್ಲಾಹನ ವಚನಗಳಾದ ಕಾರಣ ಅದು ಈ ವಿದ್ಯಮಾನವನ್ನು ಅಂಗೀಕರಿಸಿದೆ.

ಇತಿಹಾಸವು ಕೊನೆಗೊಂಡು ನ್ಯಾಯವಿಚಾರಣೆಯ ದಿನವು (ಪ್ರಳಯದಿನವು) ಬರುವಾಗ, ಅದು ಒಮ್ಮೆಲೆ ಅಚಾನಕ್ಕಾಗಿ ಸಂಭವಿಸುತ್ತದೆಂದು ಕುರ್‌ಆನ್ ಹೇಳುತ್ತದೆ. ಅದು ಕೆಲವರನ್ನು ಹಗಲಿನ ಸಮಯದಲ್ಲಿ ಹಿಡಿದರೆ ಇನ್ನು ಕೆಲವರನ್ನು ರಾತ್ರಿಯ ಸಮಯದಲ್ಲಿ ಹಿಡಿಯುತ್ತದೆಂದು ಕುರ್‌ಆನ್ ಹೇಳುತ್ತದೆ. ಅಲ್ಲಾಹನ ದೈವಿಕ ಯುಕ್ತಿ ಮತ್ತು ಕಾಲವಲಯಗಳ ಬಗ್ಗೆ ಅವನಿಗಿರುವ ಪೂರ್ವಜ್ಞಾನದೆಡೆಗೆ ಇದು ಬೆಳಕು ಚೆಲ್ಲುತ್ತದೆ. ವಾಸ್ತವಿಕವಾಗಿ ಈ ಸಂಶೋಧನೆಯು ಹದಿನಾಲ್ಕು ಶತಮಾನಗಳ ಹಿಂದೆ ಅಸ್ತಿತ್ವದಲ್ಲಿರಲಿಲ್ಲ. ಇದು ಒಬ್ಬ ವ್ಯಕ್ತಿಯ ಮೆದುಳಿನಿಂದ ಹೊರಬಂದ ವಿಚಾರವಾಗಲಿ ಅಥವಾ ಒಬ್ಬನ ಅನುಭವದ ಫಲಿತಾಂಶವಾಗಲಿ ಆಗಿರುವ ಸಾಧ್ಯತೆಯಿಲ್ಲ. ಇಲ್ಲಿ ಕುರ್‌ಆನ್ ತನ್ನ ದೈವಿಕತೆಯನ್ನು ಇನ್ನೊಂದು ರೂಪದಲ್ಲಿ ಸಾಬೀತುಪಡಿಸಿದೆ.

## ಸಮಾಪ್ತಿ

ಈ ಉದಾಹಣೆಯ ಉದ್ದೇಶಕ್ಕಾಗಿ ಉತ್ತಮ ಊಹೆಗಳ ವಿಷಯಕ್ಕೆ ಕೊನೆಯದಾಗಿ ಮರಳಿ ಬರುವುದಾದರೆ, ಮೇಲೆ ಉಲ್ಲೇಖಿಸಿದ ಮೂರು ವಿಷಯಗಳ ಬಗ್ಗೆ –ಅಂದರೆ ಜೇನು ನೊಣದ ಲಿಂಗ, ಸೂರ್ಯನ ಚಲನೆ ಮತ್ತು ಕಾಲವಲಯಗಳ ಅಸ್ತಿತ್ವ– ಒಬ್ಬ ವ್ಯಕ್ತಿ ಸರಿಯಾಗಿ ಊಹಿಸುವ ಅವಕಾಶವು ಎಂಟರಲ್ಲೊಂದು (1/8) ಮಾತ್ರವಾಗಿದೆ.

ಖಂಡಿತವಾಗಿಯೂ, ಒಬ್ಬ ವ್ಯಕ್ತಿ ಉತ್ತಮ ಊಹೆಗಳ ಪಟ್ಟಿಯನ್ನು ಇನ್ನಷ್ಟು ದೊಡ್ಡದಾಗಿಸುತ್ತಾ ಈ ಉದಾಹರಣೆಯನ್ನು ಇನ್ನೂ ಇನ್ನೂ ಮುಂದುವರಿಸಬಹುದು. ಆದರೆ ಹೀಗೆ ಮಾಡುವಾಗ ಊಹೆಗಳ ಸಂಖ್ಯೆಯು ಹೆಚ್ಚುತ್ತಾ ಹೆಚ್ಚುತ್ತಾ ಸಾಗುತ್ತದೆ. ಆದರೆ ಸರಿಯಾಗುವ ಅವಕಾಶವು

ಕಡಿಮೆಯಾಗುತ್ತಾ ಸಾಗುತ್ತದೆ. ಆದರೆ ಮುಹಮ್ಮದ್(ﷺ)ರವರು ಒಬ್ಬ ಅನಕ್ಷರಸ್ಥರಾಗಿದ್ದೂ ಸಹ, ಸಾವಿರ ಸಾವಿರ ಸಂಖ್ಯೆಯ ವಿಷಯಗಳ ಬಗ್ಗೆ ಒಂದು ಸಣ್ಣ ತಪ್ಪನ್ನೂ ಮಾಡದೆ ಸರಿಯಾಗಿ ಊಹಿಸಿದರು ಎನ್ನುವುದು ಕುರ್‌ಆನ್ ಅವರ ರಚನೆಯಾಗಿದೆ ಎಂಬ ಸಿದ್ಧಾಂತವನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತದೆ. ಇಸ್ಲಾಮಿನ ಪರಮ ಶತ್ರುಗಳು ಕೂಡ ಇದನ್ನು ಅಲ್ಲಗಳೆಯಬೇಕಾಗುತ್ತದೆ!

ನಿಜ, ಕುರ್‌ಆನ್ ಇಂತಹ ಒಂದು ಸವಾಲನ್ನು ನಿರೀಕ್ಷಿಸುತ್ತದೆ. ಒಬ್ಬ ವ್ಯಕ್ತಿ ಒಂದು ವಿದೇಶಿ ನೆಲಕ್ಕೆ ಬಂದು ಅಲ್ಲಿರುವ ಒಬ್ಬನೊಂದಿಗೆ, "ನನಗೆ ನಿಮ್ಮ ತಂದೆ ಯಾರೆಂದು ಗೊತ್ತಿದೆ. ಅವರನ್ನು ನಾನು ಭೇಟಿಯಾಗಿದ್ದೇನೆ" ಎನ್ನುವಾಗ ಬಹುಶಃ ಆ ವಿದೇಶಿ ವ್ಯಕ್ತಿ ಈತನ ಮಾತಿನ ಬಗ್ಗೆ ಸಂಶಯಪಡುತ್ತಾ, "ನೀವು ಈಗಷ್ಟೇ ಇಲ್ಲಿಗೆ ಬಂದಿದ್ದೀರಿ. ನಿಮಗೆ ನನ್ನ ತಂದೆ ಯಾರೆಂದು ಗೊತ್ತಿರಲು ಹೇಗೆ ಸಾಧ್ಯ?" ಎಂದು ನಿಸ್ಸಂಶಯವಾಗಿಯೂ ಕೇಳುವನು. ಇದರ ಫಲಿತಾಂಶವಾಗಿ, ಆ ವ್ಯಕ್ತಿ ಕೇಳುವನು: "ಹೇಳಿ, ನನ್ನ ತಂದೆ ಉದ್ದವಾಗಿದ್ದಾರೋ ಅಥವಾ ಗಿಡ್ಡವಾಗಿದ್ದಾರೋ? ಕಪ್ಪಗಿದ್ದಾರೋ ಅಥವಾ ಬೆಳ್ಳಗಿದ್ದಾರೋ? ಅವರು ಹೇಗಿದ್ದಾರೆ?" ಆದರೆ ಆ ಸಂದರ್ಶಕ ಎಲ್ಲ ಪ್ರಶ್ನೆಗಳಿಗೂ ಸರಿಯಾಗಿ ಉತ್ತರಿಸಿದರೆ, ಆ ವ್ಯಕ್ತಿ ಯಾವುದೇ ಆಯ್ಕೆಯೂ ಇಲ್ಲದೆ ಹೇಳುವನು: "ನಿಮಗೆ ನನ್ನ ತಂದೆಯ ಬಗ್ಗೆ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ. ಆದರೆ ಅವರ ಬಗ್ಗೆ ನೀವು ಹೇಗೆ ಅರಿತಿರಿ ಎಂಬುದು ನನಗೆ ಗೊತ್ತಿಲ್ಲ. ಆದರೂ ನಿಮಗೆ ಅವರ ಬಗ್ಗೆ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ."

ಕುರ್‌ಆನ್‌ನೊಂದಿಗಿರುವ ಪರಿಸ್ಥಿತಿಯೂ ಇದೇ ಆಗಿದೆ. ತನ್ನ ಉದ್ಭವವು ಸರ್ವವನ್ನೂ ಸೃಷ್ಟಿಸಿದ ಸೃಷ್ಟಿಕರ್ತನಿಂದಾಗಿದೆಯೆಂದು ಅದು ಹೇಳುತ್ತದೆ. ಆಗ ಎಲ್ಲರಿಗೂ ಹೀಗೆ ಕೇಳುವ ಹಕ್ಕಿದೆ: "ನನಗೆ ಮನದಟ್ಟು ಮಾಡಿಕೊಡಿ. ಈ ಗ್ರಂಥದ ಲೇಖಕನು ನಿಜವಾಗಿಯೂ ಜೀವವನ್ನು ಮತ್ತು ಸಂಪೂರ್ಣ

ವಿಶ್ವವನ್ನು ಸೃಷ್ಟಿಸಿದ ಸೃಷ್ಟಿಕರ್ತನಾಗಿದ್ದರೆ ಅವನಿಗೆ ಇದರ ಬಗ್ಗೆ ಮತ್ತು ಅದರ ಬಗ್ಗೆ, ಹಾಗೂ ಅದರ ಬಗ್ಗೆ ಅರಿವು ಇರಬೇಕಾಗಿದೆ." ಆದರೆ ಕುರ್‌ಆನನ್ನು ಸಂಶೋಧನೆ ಮಾಡಿದ ಬಳಿಕ ಎಲ್ಲರೂ ಅನಿವಾರ್ಯವಾಗಿ ಅದೇ ಸತ್ಯಗಳನ್ನು ಕಂಡುಕೊಳ್ಳುತ್ತಾರೆ. ನಮಗೆ ಕೆಲವು ವಿಷಯಗಳಂತೂ ಖಚಿತವಾಗಿ ಗೊತ್ತಿದೆ. ಅದೇನೆಂದರೆ ಕುರ್‌ಆನ್ ದೃಢೀಕರಿಸುವ ಎಲ್ಲವನ್ನೂ ಪರೀಕ್ಷಿಸಲು ನಾವು ತಜ್ಞರಾಗಬೇಕಿಲ್ಲ. ಕುರ್‌ಆನ್‌ನಲ್ಲಿರುವ ಸತ್ಯಗಳನ್ನು ಪರೀಕ್ಷಿಸಿ ದೃಢೀಕರಿಸುವುದು ಮುಂದುವರಿದಂತೆ ನಮ್ಮ ವಿಶ್ವಾಸವು ಕೂಡ ಹೆಚ್ಚಾಗುತ್ತದೆ. ಒಬ್ಬ ವ್ಯಕ್ತಿ ತನ್ನ ಜೀವನದಾದ್ಯಂತ ಇವುಗಳನ್ನು ಮಾಡುತ್ತಿರಬೇಕಾಗಿದೆ.

**ಅಲ್ಲಾಹು ಎಲ್ಲರನ್ನೂ ಸತ್ಯದೆಡೆಗೆ ಮುನ್ನಡೆಸಲಿ.**

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .

*********